REGISTERED WITH RNI NEW DELHI REG. N0.69683/97-Postal Registration No.RNP/KA/BGS/2259/2021-2023
Office of Posting: Bangalore PSO, Bangalore - 560026.; Date of Posting & Publishing Every Wednesday; Price Rs. 2 (Pages-8)

ಪಟ್ಟಣ ಸಹಕಾರ ಬ್ಯಾಂಕುಗಳ
ವಾರ್ತಾ ಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧಿಕೃತ ವಾರಪತ್ರಿಕೆ

ಸಂಪುಟ : 30 । ಸಂಚಿಕೆ : 17 । ಆಗಸ್ಟ್ 2, 2023 । ಬುಧವಾರ । ಪುಟಗಳು : 8 । ಬೆಲೆ : 2/-

# ಬೆಂಗಳೂರಿನಲ್ಲಿ ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರು/ ಉಪಾಧ್ಯಕ್ಷರು ಮತ್ತು ವೃತ್ತಿಪರ ನಿರ್ದೇಶಕರು ಹಾಗೂ B.O.M. ಸದಸ್ಯರುಗಳಿಗೆ ಜರುಗಿದ ಒಂದು ದಿನದ ರಾಜ್ಯ ಮಟ್ಟದ ವಿಚಾರ ಸಂಕಿರಣ




**ಬೆಂಗಳೂರು** : ದಿನಾಂಕ : 25.07.2023ರಂದು ಮಹಾಮಂಡಳದ "ಕೆ.ಎಚ್. ಪಾಟೀಲ ಸಭಾಂಗಣ"ದಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರು / ಉಪಾಧ್ಯಕ್ಷರು ಮತ್ತು ವೃತ್ತಿಪರ ನಿರ್ದೇಶಕರು ಹಾಗೋ B.O.M. ಸದಸ್ಯರುಗಳಿಗೆ ಜರುಗಿದ ಒಂದು ದಿನದ ರಾಜ್ಯ ಮಟ್ಟದ ವಿಚಾರ ಸಂಕಿರಣವನ್ನು ಮಹಾಮಂಡಳದ ಉಪಾಧ್ಯಕ್ಷರಾದ ಶ್ರೀ ಬಿ.ಎಸ್. ಪರಮಶಿವಯ್ಯನವರು ಉದ್ಘಾಟಿಸಿದರು.

ನಂತರ ಅವರು ಮಾತನಾಡುತ್ತಾ, ಪಟ್ಟಣ ಸಹಕಾರ ಬ್ಯಾಂಕುಗಳು ಬಡಜನರಿಗೆ ಸೇವೆ ನೀಡುತ್ತಿವೆ. ಸಹಕಾರ ಬ್ಯಾಂಕುಗಳ ಮೇಲೆ ನಂಬಿಕೆ ಇದೆ. ನೂರಾರು ತಂತ್ರಜ್ಞಾನಗಳು ಬಂದಿವೆ. ಮಹಾಮಂಡಳದ ಶಕ್ತಿ ಶ್ರೀ ಎಚ್.ಕೆ. ಪಾಟೀಲರು. ಸನ್ಮಾನ್ಯ ಶ್ರೀ ಎಚ್.ಕೆ. ಪಾಟೀಲರ ಶ್ರಮದಿಂದ ರಿಜರ್ವ್ ಬ್ಯಾಂಕ್ ಪಟ್ಟಣ ಸಹಕಾರ ಬ್ಯಾಂಕುಗಳ ಆಡಳಿತ ಮಂಡಳಿಗೆ ಸುಸ್ತಿ ಸಾಲಗಳ ವಸೂಲಾತಿಗಾಗಿ ಏಕಕಾಲೀಕ ಸಾಲ ತೀರುವಳಿ ಮತ್ತು ರೈಟ್ ಆಫ್‌ಗೆ ಅಧಿಕಾರ ನೀಡಿದೆ. ಹೊಸ ಶಾಖೆ ಪ್ರಾರಂಭಕ್ಕೆ ಆಯಾ ಬ್ಯಾಂಕಿನ ಆಡಳಿತ ಮಂಡಳಿಗಳಿಗೆ ಪೂರ್ಣ ಅಧಿಕಾರ ದೊರಕುವಂತಾಗಿದೆ. ಆದ್ಯತಾ ವಲಯದ ಸಾಲಕ್ಕೆ ಸಮಯದ ವಿಸ್ತರಣೆ ನೀಡಲಾಗಿದೆ ಎಂದರು.

3ನೇ ಪುಟಕ್ಕೆ...

## 2022-23ರಲ್ಲಿ ಬ್ಯಾಂಕುಗಳು ರೂ. 2.09 ಲಕ್ಷ ಕೋಟಿ ಮೌಲ್ಯದ ಸಾಲ ರೈಟ್-ಆಫ್ ಮಾಡಿವೆ

ಹೊಸದಿಲ್ಲಿ: ಮಾರ್ಚ್ 2023ಗೆ ಅಂತ್ಯಗೊಂಡ ಆರ್ಥಿಕ ವರ್ಷದಲ್ಲಿ ಬ್ಯಾಂಕ್‌ಗಳು ರೂ 2.09 ಲಕ್ಷ ಕೋಟಿಗೂ ಹೆಚ್ಚು ಮೌಲ್ಯದ ಅನುತ್ಪಾದಕ ಸಾಲಗಳನ್ನು ರೈಟ್ ಆಫ್ ಮಾಡಿವೆ. ಇದರೊಂದಿಗೆ ಕಳೆದ ಐದು ವರ್ಷಗಳಲ್ಲಿ ಬ್ಯಾಂಕುಗಳು ರೈಟ್ ಆಫ್ ಮಾಡಿದ ಸಾಲದ ಪ್ರಮಾಣ ರೂ 10.57 ಲಕ್ಷ ಕೋಟಿಗೆ ಏರಿಕೆಯಾಗಿದೆ ಎಂದು ಆರ್‌ಬಿಐ ಉತ್ತರವೊಂದರಲ್ಲಿ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಹೇಳಿದೆ.

ಈ ರೈಟ್ ಆಫ್‌ನಿಂದಾಗಿ ಬ್ಯಾಂಕುಗಳಿಗೆ ತಮ್ಮ ಒಟ್ಟು ಎನ್‌ಪಿಎಗಳನ್ನು ಅಥವಾ ಸಾಲಗಾರರು ಮರುಪಾವತಿಸಲು ವಿಫಲವಾದ ಸಾಲವನ್ನು ಹತ್ತು ವರ್ಷಗಳಲ್ಲಿಯೇ ಕಡಿಮೆ ಪ್ರಮಾಣಕ್ಕೆ (ಶೇ3.9) ಇಳಿಸಲು ಸಾಧ್ಯವಾಗಿದೆ. ಒಟ್ಟು ಎನ್‌ಪಿಎಗಳು ಆರ್ಥಿಕ ವರ್ಷ 2018ರಲ್ಲಿ ರೂ 10.21 ಲಕ್ಷ ಕೋಟಿ ಇದ್ದರೆ 2023ರಲ್ಲಿ ರೂ 5.55 ಲಕ್ಷ ಕೋಟಿ ಆಗಿದೆ.

ಆರ್ಥಿಕ ವರ್ಷ 2012–13ರಿಂದ ಬ್ಯಾಂಕ್‌ಗಳು ಬರೋಬ್ಬರಿ ರೂ15,31,453 ಕೋಟಿ ಸಾಲವನ್ನು ರೈಟ್ ಆಫ್ ಮಾಡಿವೆ. ಆದರೆ ಹೀಗೆ ರೈಟ್ ಆಫ್ ಮಾಡಿದ ಸಾಲಗಳು ಮರುಪಾವತಿಯಾಗದ ಸಾಲಗಳು ಎಂದು ಬ್ಯಾಂಕ್‌ಗಳ ಲೆಕ್ಕಪುಸ್ತಕಗಳಲ್ಲಿ ಉಳಿಯಲಿವೆ.

ಕಳೆದ ಮೂರು ವರ್ಷಗಳಲ್ಲಿ ರೈಟ್ ಆಫ್ ಮಾಡಿದ ಸಾಲದ ಪ್ರಮಾಣ ರೂ 586,891 ಕೋಟಿ ಆಗಿದ್ದರೆ ಅವುಗಳಲ್ಲಿ ಕೇವಲ ರೂ 1,09,186 ಕೋಟಿ (ಶೇ 18.60) ಮರುಪಾವತಿಯಾಗಿದೆ. ಸಾಲ ರೈಟ್ ಆಫ್ 2023 ಮಾರ್ಚ್‌ಗೆ ಕೊನೆಗೊಂಡ ಆರ್ಥಿಕ ವರ್ಷದಲ್ಲಿ ರೂ. 2,09,144 ಕೋಟಿಗೆ ಏರಿಕೆಯಾಗಿದ್ದರೆ ಒಂದು ವರ್ಷದ ಹಿಂದೆ, ಮಾರ್ಚ್ 2022ರಲ್ಲಿ ಈ ಪ್ರಮಾಣ ರೂ. 1,74,966 ಕೋಟಿ ಆಗಿದ್ದರೆ ಮಾರ್ಚ್ 2021 ರಲ್ಲಿ ರೂ 2,02,781 ಕೋಟಿ ಆಗಿತ್ತು.

ಅಂತರರಾಷ್ಟ್ರೀಯ ವಹಿವಾಟಿನಲ್ಲಿ ರೂಪಾಯಿ ಬಳಸಿ : ಆರ್‌ಬಿಐ ಸಮಿತಿಯಿಂದ ಶಿಫಾರಸ್ಸು 2

ದಿ ಮರ್ಚಂಟ್ಸ್ ಅರ್ಬನ್ ಕೋ-ಆಪ್‌ರೇಟಿವ್ ಬ್ಯಾಂಕ್ ಲಿ., ಗದಗ : 68ನೇ ವಾರ್ಷಿಕ ಸಭೆ, 93 ಲಕ್ಷ ಲಾಭ ಗಳಿಕೆ 4

ನಿಮ್ಮ ಪ್ರಶ್ನೆ ನಮ್ಮ ಉತ್ತರ 7

## ಸಂಪಾದಕೀಯ

## ಅತ್ಮೀಯ ಸಹಕಾರಿಗಳೇ...



# ಬ್ಯಾಂಕುಗಳು ರೈಟ್‌ಆಫ್ ಮಾಡುತ್ತಿರುವುದು ಜನರು ಬ್ಯಾಂಕಿನಲ್ಲಿಟ್ಟ ಹಣ ಎನ್ನುವುದನ್ನು ಎಲ್ಲರೂ ಅರಿಯಬೇಕಿದೆ

ನಾವುಗಳೆಲ್ಲ ಅರ್ಥ ಮಾಡಿಕೊಳ್ಳಬೇಕಾದ ವಿಷಯವೊಂದಿದೆ, ಅದು ಆರ್ಥಿಕ ಅಬಲರಿಗೆ, ಶೋಷಿತ ಸಮುದಾಯಗಳನ್ನು ಮುನ್ನೆಡೆಸುವ ಜವಾಬ್ದಾರಿ ಯಾವುದೇ ಪ್ರಗತಿಪರ ಸರ್ಕಾರದ್ದಾಗಿರುತ್ತದೆ ಎನ್ನುವುದು. ಆ ಸಮುದಾಯಗಳನ್ನು ಹಿಂದೆ ಬಿಟ್ಟು ರಾಜ್ಯ, ದೇಶ ಪ್ರಗತಿ ಸಾಧಿಸಲು ಸಾಧ್ಯವಿಲ್ಲ ಎನ್ನುವುದನ್ನು ಎಲ್ಲ ಆರ್ಥಿಕ ತಜ್ಞರು, ಸಮಾಜಶಾಸ್ತ್ರಜ್ಞರು ಹೇಳುತ್ತಾರೆ. ಅವರನ್ನು ಇರುವಂತೆ ಬಿಟ್ಟು, ದೇಶ ಪ್ರಗತಿ ಸಾಧಿಸಿದೆ, ಕೆಲವೇ ವರ್ಷಗಳಲ್ಲಿ ವಿಶ್ವದ ಪ್ರಬಲ ಆರ್ಥಿಕ ಶಕ್ತಿಯಾಗಿ ನಾವು ಹೊರಹೊಮ್ಮಲಿದ್ದೇವೆ ಎನ್ನುವುದು ಹುಸಿ ಮಾತುಗಳಷ್ಟೆ.

ಇದರೊಂದಿಗೆ, ಈ ವರ್ಗದ ಜನರಿಗೆ ಕೆಲ ಸವಲತ್ತುಗಳನ್ನು, ಕಲ್ಯಾಣ ಯೋಜನೆಗಳನ್ನು ಜಾರಿಗೊಳಿಸಿದರೆ, ಬಡ ರೈತರ ಸಾಲಮನ್ನಾ ಮಾಡಿದರೆ ಸಾಕು; ದೇಶ ಆರ್ಥಿಕವಾಗಿ ದಿವಾಳಿಯಾಗುತ್ತದೆ ಎಂದು ಬೊಬ್ಬಿರಿಯುವ ಒಂದು ಮಂದ ದೃಷ್ಟಿಯ ವರ್ಗವಿದೆ. ಅವರುಗಳು ರಿಸರ್ವ್ ಬ್ಯಾಂಕಿನ ವರದಿಯನ್ನು ಮುಕ್ತ ಮನಸ್ಸಿನಿಂದ ನೋಡಲಿ ಎಂದು ಇಲ್ಲಿ ಪ್ರಸ್ತಾಪ ಮಾಡುತಿದ್ದೇನೆ. ಮಾರ್ಚ್ 2023ರ ಕೊನೆಯಲ್ಲಿ ನಮ್ಮ ಸಾರ್ವಜನಿಕ ಬ್ಯಾಂಕುಗಳು ಎರಡು ಲಕ್ಷ ಕೋಟಿ ರೂಪಾಯಿಗೂ ಅಧಿಕ ಮೊತ್ತದ ಸಾಲಗಳನ್ನು ರೈಟ್‌ಆಫ್ ಮಾಡಿವೆ. ಕಳೆದ ಮೂರು ವರ್ಷಗಳಲ್ಲಂತೂ ಈ ರೈಟ್‌ಆಫ್ ಪ್ರಮಾಣ ಹೆಚ್ಚುತ್ತಲೇ ಹೋಗಿದೆ. ಹೀಗೆ ಕಳೆದ ಐದು ವರ್ಷಗಳಲ್ಲಿ ಬ್ಯಾಂಕಿಂಗ್ ವಲಯದಿಂದ ಒಟ್ಟು ಹತ್ತು ಲಕ್ಷ ಕೋಟಿಗೂ ಅಧಿಕ ಮೊತ್ತದ ಸಾಲವನ್ನು ರೈಟ್‌ಆಫ್ ಮಾಡಲಾಗಿದೆ ಎಂದು ಆರ್‌ಬಿಐ ಹೇಳಿದೆ. ಇಷ್ಟು ಬೃಹತ್ ಮೊತ್ತದ ಸಾಲಮನ್ನಾವಾಗಿರುವುದು ಕೋಟ್ಯಾಧಿಪತಿಗಳ, ಉದ್ದಿಮೆದಾರರ, ಕೈಗಾರಿಕೋದ್ಯಮಿಗಳ ಸಾಲವಾಗಿದೆ. ಹೀಗೆ ಸಿರಿವಂತರ ಸಾಲ ಮನ್ನ ಮಾಡುವುದರಿಂದ ದೇಶ ದಿವಾಳಿಯಾಗುವುದಿಲ್ಲವೇ ಎಂದು ನಾನು ಪ್ರಜ್ಞಾವಂತರನ್ನು ಕೇಳ ಬಯಸುತ್ತೇನೆ.

ಈ ರೀತಿ ರೈಟ್‌ಆಫ್ ಮಾಡುವುದರಿಂದ ದೇಶದ ಆರ್ಥಿಕತೆ ಹಾಗೂ ಸಾಲ ನೀಡುವ, ನಿರ್ವಹಿಸುವ ವ್ಯವಸ್ಥೆಯನ್ನೇ ಇದು ನಾಶಪಡಿಸುತ್ತದೆ. ಈ ರೀತಿ ರೈಟ್‌ಆಫ್ ಮಾಡುತ್ತಿರುವುದು ಜನರು ಬ್ಯಾಂಕಿನಲ್ಲಿಟ್ಟ ಹಣ. ನಂತರ ಕೇಂದ್ರ ಸರ್ಕಾರ ಬ್ಯಾಂಕುಗಳಿಗೆ ಆದ ನಷ್ಟ ಭರ್ತಿ ಮಾಡಿಕೊಡುವುದರಿಂದ ಇದು ಜನರ ತೆರಿಗೆ ಹಣ ಎನ್ನುವುದನ್ನು ಅರಿಯಬೇಕು.

ನಿಮಗೆ ನೆನಪು ಮಾಡ ಬಯಸುತ್ತೇನೆ; 2014ರಲ್ಲಿ ಅಂದಿನ ಆರ್‌ಬಿಐ ಗವರ್ನರ್ ರಘುರಾಮ್ ರಾಜನ್ ಅವರು, ಬ್ಯಾಂಕುಗಳಿಗೆ ವಂಚಿಸುವವರ ದೊಡ್ಡ ಪಟ್ಟಿಯನ್ನೇ 2015ರಲ್ಲೇ ಪ್ರಧಾನಮಂತ್ರಿಗಳಿಗೆ ಸಲ್ಲಿಸಿದ್ದರು. ತಮಾಷೆಯೆಂದರೆ, ಇಂದಿಗೂ ಆ ಕುರಿತಂತೆ ಯಾವುದೇ ಕ್ರಮ ತೆಗೆದುಕೊಂಡಿಲ್ಲದಿರುವುದು.

ಕೆಲವೇ ಶ್ರೀಮಂತರ ತೆರಿಗೆ ವಿನಾಯಿತಿ, ಬ್ಯಾಂಕ್ ಸಾಲ ಮನ್ನಾ ಮಾಡುವುದರಿಂದ, ಅವರ ಆರ್ಥಿಕತೆಯ ಬೊಜ್ಜು ಬೆಳೆಯುತ್ತದೆಯೇ ಹೊರತು ದೇಶದ ಆರ್ಥಿಕ ಬೆಳವಣಿಗೆ ಯಾವುದೇ ಪ್ರಯೋಜನವಿಲ್ಲ. ಬದಲಿಗೆ ಆರ್ಥಿಕ ದುರ್ಬಲರ, ಶೋಷಿತ ವರ್ಗದ ಜನರ ಕಲ್ಯಾಣಕ್ಕಾಗಿ ಯೋಜನೆಗಳನ್ನು ರೂಪಿಸಿ, ಜಾರಿಗೊಳಿಸಲಿ ಆಗ ನಿಜವಾದ ಅರ್ಥದಲ್ಲಿ ನಮ್ಮ ದೇಶ ಆರ್ಥಿಕ ಶಕ್ತಿ ದೃಡವಾಗಿ ಬೆಳೆಯುತ್ತದೆ ಹಾಗೂ ಆರ್ಥಿಕತೆಯ ಸೂಪರ್‌ಪವರ್ ಶಕ್ತಿಯಾಗಿ ಹೊರ ಹೊಮ್ಮುತ್ತದೆ ಎನ್ನುವ ವಿಶ್ವಾಸ ನನ್ನದು.

▸▸ ಎಚ್.ಕೆ. ಪಾಟೀಲ್

# ಅಂತರರಾಷ್ಟ್ರೀಯ ವಹಿವಾಟಿನಲ್ಲಿ ರೂಪಾಯಿ ಬಳಸಿ : ಆರ್‌ಬಿಐ ಸಮಿತಿಯಿಂದ ಶಿಫಾರಸು

**ನವದೆಹಲಿ :** ರೂಪಾಯಿಯನ್ನು ಅಂತಾರಾಷ್ಟ್ರೀಯವಾಗಿ ಹೆಚ್ಚೆಚ್ಚು ಬಳಸಲು ಆರ್‌ಬಿಐನ ಸಮಿತಿಯೊಂದು ವಿವಿಧ ಕ್ರಮಗಳನ್ನು ಶಿಫಾರಸು ಮಾಡಿದೆ. ವಿದೇಶೀ ವಿನಿಮಯ ದರದ ಭಾಗವಾಗಿರುವ ಎಸ್‌ಡಿಆರ್ ಗುಂಪಿನಲ್ಲಿ ರೂಪಾಯಿಯನ್ನು ಒಳಗೊಳ್ಳುವುದು, ಅಂತರರಾಷ್ಟ್ರೀಯ ವ್ಯವಹಾರದಲ್ಲಿ ರೂಪಾಯಿ ಕರೆನ್ಸಿಯಲ್ಲಿ ಇನ್ವಾಯ್ಸ್ ಸಲ್ಲಿಸುವುದು, ಕ್ಯಾಪಿಟಲ್ ಅಕೌಂಟ್ ಟ್ರಾನ್ಸಾಕ್ಷನ್‌ನಲ್ಲಿ ರೂಪಾಯಿ ಬಳಸುವುದು ಇತ್ಯಾದಿ ರೀತಿಯಲ್ಲಿ ಕ್ರಮಗಳನ್ನು ಕೈಗೊಳ್ಳಬಹುದು ಎಂದು ಆರ್‌ಬಿಐನ ಎಕ್ಸಿಕ್ಯೂಟಿವ್ ಡೈರೆಕ್ಟರ್ ರಾಧಾ ಶ್ಯಾಮ್ ರಾಥೋ ನೇತೃತ್ವದ ಇಂಟರ್ ಡಿಪಾರ್ಟ್‌ಮೆಂಟಲ್ ಗ್ರೂಪ್ ಶಿಫಾರಸು ಮಾಡಿದೆ.

ಯಾವುದೇ ಕರೆನ್ಸಿಯ ಅಂತರರಾಷ್ಟ್ರೀಕರಣಕ್ಕೂ ಆ ದೇಶದ ಆರ್ಥಿಕ ಬೆಳವಣಿಗೆಗೂ ಕೊಂಡಿ ಇದೆ. ಅದರಲ್ಲೂ ಮುಖ್ಯವಾಗಿ ಜಾಗತಿಕ ವಹಿವಾಟಿನಲ್ಲಿ ಒಂದು ದೇಶ ಬೆಳವಣಿಗೆ ಸಾಧಿಸುವುದಕ್ಕೂ ಕರೆನ್ಸಿ ಅಂತರರಾಷ್ಟ್ರೀಕರಣಕ್ಕೂ ಸಂಬಂಧ ಇದೆ. ಅತಿವೇಗವಾಗಿ ಬೆಳೆಯುತ್ತಿರುವ ದೇಶಗಳಲ್ಲಿ ಭಾರತವೂ ಒಂದು. ಹಲವು ಪ್ರಮುಖ ಎಡರುತೊಡರುಗಳ ನಡುವೆಯೂ ಭಾರತ ಉತ್ತಮ ಪ್ರಗತಿ ಸಾಧಿಸಿದೆ. ಈ ಹಿನ್ನೆಲೆಯಲ್ಲಿ ಅಂತರರಾಷ್ಟ್ರೀಯ ಕರೆನ್ಸಿಯಾಗುವ ಸಾಮರ್ಥ್ಯ ರೂಪಾಯಿಗೆ ಇದೆ ಎಂಬುದು ಆರ್‌ಬಿಐನ ಈ ಸಮಿತಿಯ ಅನಿಸಿಕೆ.

ಭಾರತ ಹಾಗೂ ಹೊರಗೆ ಅನಿವಾಸಿ ಭಾರತೀಯರಿಗೆ ರೂಪಾಯಿ ಖಾತೆಗಳನ್ನು ತೆರೆಯಬೇಕು. ಅಂತರ್ ದೇಶೀಯ ವಹಿವಾಟುಗಳಿಗೆ ಭಾರತೀಯ ಪೇಮೆಂಟ್ ವ್ಯವಸ್ಥೆ ಅಳವಡಿಸಬೇಕು ಎಂದೂ ಆರ್‌ಬಿಐನ ಇಂಟರ್–ಡಿಪಾರ್ಟ್‌ಮೆಂಟಲ್ ಗ್ರೂಪ್ ಸಲಹೆ ಕೊಟ್ಟಿದೆ.

ಆರ್‌ಬಿಐ ತನ್ನ ಸಮಿತಿ ಸಲ್ಲಿಸಿದ ಶಿಫಾರಸುಗಳನ್ನು ವೆಬ್‌ಸೈಟ್‌ನಲ್ಲಿ ಪೋಸ್ಟ್ ಮಾಡಿದೆ. ಇದು ಆರ್‌ಬಿಐನ ನಿಲುವು ಅಲ್ಲ ಎಂದೂ ಸ್ಪಷ್ಟಪಡಿಸಿದೆ. ಈ ವರದಿಯ ಅಂಶಗಳನ್ನು ಪರಾಮರ್ಶಿಸಿ, ಶಿಫಾರಸುಗಳನ್ನು ಹೇಗೆ ಜಾರಿಗೊಳಿಸಬಹುದು ಎಂಬ ನಿಟ್ಟಿನಲ್ಲಿ ಆರ್‌ಬಿಐ ಆಲೋಚಿಸಲಿದೆ. ಅಂತರರಾಷ್ಟ್ರೀಕರಣವು ರೂಪಾಯಿಯನ್ನು ನಿವಾಸಿ ಮತ್ತು ಅನಿವಾಸಿಗಳಿಬ್ಬರೂ ಮುಕ್ತವಾಗಿ ವಹಿವಾಟು ನಡೆಸಬಹುದು ಮತ್ತು ಜಾಗತಿಕ ವ್ಯಾಪಾರಕ್ಕಾಗಿ ಮೀಸಲು ಕರೆನ್ಸಿಯಾಗಿ ಬಳಸಬಹುದು ಎಂದು ಸೂಚಿಸುತ್ತದೆ. ಇದು ಆಮದು ಮತ್ತು ರಫ್ತು ವ್ಯಾಪಾರಕ್ಕಾಗಿ ರೂಪಾಯಿಯನ್ನು ಉತ್ತೇಜಿಸುವುದನ್ನು ಒಳಗೊಂಡಿರುತ್ತದೆ ಮತ್ತು ನಂತರ ಇತರ ಚಾಲ್ತಿ ಖಾತೆಯ ವಹಿವಾಟುಗಳನ್ನು ನಂತರ ಬಂಡವಾಳ ಖಾತೆಯ ವ್ಯವಹಾರಗಳಲ್ಲಿ ಅದರ ಬಳಕೆಯನ್ನು ಒಳಗೊಂಡಿರುತ್ತದೆ.

...1ನೇ ಪುಟದಿಂದ



ಮಹಾಮಂಡಳದ ನಿರ್ದೇಶಕರಾದ ಶ್ರೀ ರುದ್ರೇಗೌಡರು ಮಾತನಾಡಿ ಅಧ್ಯಕ್ಷರು / ಉಪಾಧ್ಯಕ್ಷರು, ಆಡಳಿತ ಮಂಡಳಿ ನಿರ್ದೇಶಕರು ಮತ್ತು B.O.M. ಸದಸ್ಯರು ಮೊದಲ ಬಾರಿಗೆ ಈ ಕಾರ್ಯಾಗಾರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುತ್ತಿರುವುದಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಪಟ್ಟಣ ಸಹಕಾರ ಬ್ಯಾಂಕುಗಳು ಬೋರ್ಡ್ ಆಫ್ ಮ್ಯಾನೇಜ್‌ಮೆಂಟ್ ಬಗ್ಗೆ ಅನೇಕ ಸಲಹೆಗಳು ಬಂದವು. ಮಹಾಮಂಡಳದ ಅಧ್ಯಕ್ಷರಾದ ಶ್ರೀ ಎಚ್.ಕೆ. ಪಾಟೀಲರ ಜೊತೆ ಇದರ ಬಗ್ಗೆ ಚರ್ಚೆ ನಡೆಯಿತು. ಅದರಲ್ಲಿ ಭಾಗವಹಿಸಿದ ಕೆಲವು ಪಟ್ಟಣ ಸಹಕಾರ ಬ್ಯಾಂಕುಗಳ ಪ್ರತಿನಿಧಿಗಳು ಬೋರ್ಡ್ ಆಫ್ ಮ್ಯಾನೇಜ್‌ಮೆಂಟ್ ಬೇಕು. ಕೆಲವೊಂದು ಪಟ್ಟಣ ಸಹಕಾರ ಬ್ಯಾಂಕುಗಳು ಪ್ರತಿನಿಧಿಗಳು ಬೋರ್ಡ್ ಆಫ್ ಮ್ಯಾನೇಜ್‌ಮೆಂಟ್ ಬೇಡ ಎಂದರು.

2010ರಲ್ಲಿ ವೈ.ಹೆಚ್. ಮಾಲೇಗಾವ್‌ರವರ ಅಧ್ಯಕ್ಷತೆಯಲ್ಲಿ ಸ್ಥಾಪಿಸಲಾದ ತಜ್ಞರ ಸಮಿತಿಯು ಪಟ್ಟಣ ಸಹಕಾರ ಬ್ಯಾಂಕುಗಳು ವ್ಯವಸ್ಥಾಪನಾ ಮಂಡಳಿ (B.O.M.) ರಚಿಸಲು ಶಿಫಾರಸ್ಸು ಮಾಡಿತು. 2015ರಲ್ಲಿ ಶ್ರೀ ಆರ್. ಗಾಂಧಿಯವರ ಉನ್ನತ ಅಧಿಕಾರ ಸಮಿತಿಯು ಪಟ್ಟಣ ಸಹಕಾರ ಬ್ಯಾಂಕುಗಳು B.O.M. ರಚಿಸುವುದು ಸೂಕ್ತ ಎಂದು ಹೇಳಿತು. ಆರ್‌ಬಿಐ ಡಿಸೆಂಬರ್ 31, 2019 ರಂದು ರೂ.100 ಕೋಟಿ ಮತ್ತು ಅದಕ್ಕಿಂತ ಹೆಚ್ಚಿನ ಠೇವಣಿಗಳನ್ನು ಹೊಂದಿರುವ ಪಟ್ಟಣ ಸಹಕಾರ ಬ್ಯಾಂಕುಗಳು B.O.M. ರಚಿಸುವುದಕ್ಕಾಗಿ ಮಾರ್ಗಸೂಚಿಗಳನ್ನು ಹೊರಡಿಸಿತು. ಈ ಬೋರ್ಡ್ ಆಫ್ ಮ್ಯಾನೇಜ್‌ಮೆಂಟ್ ಇದರ ಉದ್ದೇಶ ಫಲಪ್ರದವಾಗಿದೆಯಾ ಅನ್ನುವುದರ ಬಗ್ಗೆ ಈ ಕಾರ್ಯಾಗಾರದಲ್ಲಿ ತಿಳಿದುಕೊಳ್ಳಬಹುದು. ಆಡಳಿತ ಮಂಡಳಿಯು ನಿರ್ಧಾರವನ್ನು ತೆಗೆದುಕೊಳ್ಳುವ ಸಂಪೂರ್ಣ ಅಧಿಕಾರ ಹೊಂದಿದೆ. ವ್ಯವಸ್ಥಾಪನಾ ಮಂಡಳಿ (B.O.M). ಸಲಹೆಗಳನ್ನು ನೀಡುವುದಾಗಿದೆ ಎಂದರು. ಈ ಕಾರ್ಯಾಗಾರದಲ್ಲಿ ರಿಸರ್ವ್ ಬ್ಯಾಂಕಿನ ನಿವೃತ್ತ ಎ.ಜಿ.ಎಂ. ಶ್ರೀಮತಿ ಅಂಬುಜಾ ಲಕ್ಷ್ಮೀನಾರಾಯಣ, ಬ್ಯಾಂಕಿಂಗ್ ಕ್ಷೇತ್ರದಲ್ಲಿ ಬಹಳ ಪರಿಣತಿ ಹೊಂದಿರುವ ಎಸ್.ಜಿ.ಕುಲಕರ್ಣಿ, ಶ್ರೀ ಸುಧಾಕರ ಭಟ್ ರವರು ಉಪನ್ಯಾಸ ನೀಡಲಿದ್ದಾರೆ ಎಂದರು.

ಮಹಾಮಂಡಳದ ನಿರ್ದೇಶಕರಾದ ರಾಜಕುಮಾರ ಬಾದವಾಡಗಿರವರು ಮಾತನಾಡಿ ನಮ್ಮ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳವು ನಮ್ಮ ಬ್ಯಾಂಕುಗಳ ಆಡಳಿತ ಮಂಡಳಿ ನಿರ್ದೇಶಕರುಗಳಿಗೆ, ಮುಖ್ಯಕಾರ್ಯ ನಿರ್ವಹಣಾಧಿಕಾರಿಗಳಿಗೆ ಮತ್ತು ಹಿರಿಯ ಅಧಿಕಾರಿಗಳಿಗೆ ಹಲವಾರು ಕಾರ್ಯಕ್ರಮಗಳನ್ನು ಏರ್ಪಡಿಸುತ್ತಾ ಬಂದಿರುತ್ತದೆ. ಪ್ರತಿ ತಿಂಗಳಿಗೊಮ್ಮೆ ತರಬೇತಿ ವಿಚಾರ ಸಂಕಿರಣ ಕಾರ್ಯಾಗಾರಗಳು, ಹಾಗೆಯೇ ಎಲ್ಲರ ಬುದ್ಧಿಮತ್ತೆ ಹೆಚ್ಚಿಸುವ ಕಾರ್ಯಕ್ರಮಗಳನ್ನು ನಮ್ಮ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಎಚ್.ಕೆ. ಪಾಟೀಲರ ನಿರ್ದೇಶನದ ಅನ್ವಯ ನಮ್ಮ ಮಹಾಮಂಡಳ ಆಯೋಜಿಸುತ್ತಾ ಬಂದಿದೆ. ನಮ್ಮ ಪಟ್ಟಣ ಸಹಕಾರ ಬ್ಯಾಂಕುಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ನಿವಾರಿಸಿಕೊಳ್ಳಲಿಕ್ಕೆ ಇಂತಹ ವಿಚಾರ ಸಂಕಿರಣಗಳು ಅನುಕೂಲವಾಗುತ್ತವೆ.

ಈ ವಿಚಾರ ಸಂಕಿರಣದಲ್ಲಿ ಆರ್‌ಬಿಐ ಸುತ್ತೋಲೆ ಅನ್ವಯ ಆಡಳಿತ ಮಂಡಳಿ ಪಾತ್ರ ಕುರಿತು ರಿಸರ್ವ್ ಬ್ಯಾಂಕಿನ ನಿವೃತ್ತ ಸಹಾಯಕ ಪ್ರಧಾನ ವ್ಯವಸ್ಥಾಪಕರಾದ ಶ್ರೀಮತಿ ಅಂಬುಜಾ ಲಕ್ಷ್ಮೀನಾರಾಯಣರವರು, ಆಡಳಿತ ಮಂಡಳಿ ಸದಸ್ಯರ ಹಾಗೂ B.O.M. ಸದಸ್ಯರ ಕರ್ತವ್ಯಗಳು ಹಾಗೂ ನಿರ್ವಹಣೆ ಕುರಿತು ಅಪೆಕ್ಸ್ ಬ್ಯಾಂಕಿನ ನಿವೃತ್ತ ಅಧಿಕಾರಿಗಳಾದ ಶ್ರೀ ಎಸ್.ಜಿ. ಕುಲಕರ್ಣಿರವರು, ಸಾಲ ಮತ್ತು ಮುಂಗಡಗಳ ನಿರ್ವಹಣೆ ಕುರಿತು ಭಾರತೀಯ ರಿಸರ್ವ್ ಬ್ಯಾಂಕಿನ ನಿವೃತ್ತ ಸಹಾಯಕ ಪ್ರಧಾನ ವ್ಯವಸ್ಥಾಪಕರು ಹಾಗೂ ಮಹಾಮಂಡಳದ ಬ್ಯಾಂಕಿಂಗ್ ಸಲಹೆಗಾರರಾದ ಶ್ರೀ ಸುಧಾಕರ ಭಟ್‌ರವರುಗಳು ಉಪನ್ಯಾಸ ನೀಡಿದರು.

ಪ್ರಾರಂಭದಲ್ಲಿ ಈ ವಿಚಾರ ಸಂಕಿರಣಕ್ಕೆ ಆಗಮಿಸಿದ್ದ ಪಟ್ಟಣ ಸಹಕಾರ ಬ್ಯಾಂಕುಗಳ ಪ್ರತಿನಿಧಿಗಳನ್ನು ಹಾಗೂ ಗಣ್ಯರನ್ನು ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆಯವರು ಸ್ವಾಗತಿಸಿ, ಕೊನೆಯಲ್ಲಿ ವಂದನಾರ್ಪಣೆ ಸಲ್ಲಿಸಿದರು. ಈ ವಿಚಾರ ಸಂಕಿರಣದಲ್ಲಿ ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳಿಂದ ಸುಮಾರು 200ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿ, ವಿಚಾರ ಸಂಕಿರಣದ ಸದುಪಯೋಗವನ್ನು ಪಡೆದುಕೊಂಡರು.

## ಭಾವಪೂರ್ಣ ಶ್ರದ್ಧಾಂಜಲಿ



**ಹುಬ್ಬಳ್ಳಿ :** ದಿ ಹುಬ್ಬಳ್ಳಿ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿನ ನಿರ್ದೇಶಕರಾಗಿದ್ದ ಶ್ರೀ ಸೋಮಶೇಖರ ವಿ. ಉಮರಾಣಿರವರು ದಿನಾಂಕ : 24.07.2023 ರಂದು ನಿಧನರಾದರು.

ಸೋಮಶೇಖರ ವಿ. ಉಮರಾಣಿ ಇವರ ನಿಧನಕ್ಕೆ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಎಚ್.ಕೆ. ಪಾಟೀಲರವರು, ಉಪಾಧ್ಯಕ್ಷರಾದ ಶ್ರೀ ಬಿ.ಎಸ್. ಪರಮ ಶಿವಯ್ಯನವರು ಹಾಗೂ ಆಡಳಿತ ಮಂಡಳಿ ಸದಸ್ಯರು ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿ, ಸಿಬ್ಬಂದಿ ವರ್ಗದವರು ತೀವ್ರ ಸಂತಾಪ ವ್ಯಕ್ತಪಡಿಸಿ, ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಿದರು.

## ಭಾರತದಲ್ಲಿ ಶೇ.6.1 ರಷ್ಟು ಬೆಳವಣಿಗೆ : ಐಎಂಎಫ್

**ವಾಷಿಂಗ್ಟನ್ :** ಭಾರತದ ಅರ್ಥ ವ್ಯವಸ್ಥೆಯು ಈ ವರ್ಷದಲ್ಲಿ ಶೇ.6.1ರಷ್ಟು ಬೆಳವಣಿಗೆ ಸಾಧಿಸಲಿದೆ ಎಂದು ಅಂತರ ರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ಅಂದಾಜಿಸಿದೆ.

ಇದು ಸಂಸ್ಥೆಯು ಈ ಹಿಂದೆ ಮಾಡಿದ್ದ ಅಂದಾಜಿಗಿಂತ ಶೇ.0.2ರಷ್ಟು ಹೆಚ್ಚು. 2022ರ ಕೊನೆಯ ತ್ರೈಮಾಸಿಕದಲ್ಲಿ ಕಂಡು ಬಂದ ನಿರೀಕ್ಷೆಗೂ ಮೀರಿದ ಆರ್ಥಿಕ ಬೆಳವಣಿಗೆಯ ಕಾರಣದಿಂದಾಗಿ ಅಂದಾಜು ಪರಿಷ್ಕರಿಸಲಾಗಿದೆ ಎಂದು ಐಎಂಎಫ್ ಹೇಳಿದೆ.

ಐಎಂಎಫ್ ವರದಿಯ ಪ್ರಕಾರ ಜಾಗತಿಕ ಆರ್ಥಿಕ ಬೆಳವಣಿಗೆಯು ಈ ವರ್ಷದಲ್ಲಿ ಹಾಗೂ ಮುಂದಿನ ವರ್ಷದಲ್ಲಿ ಶೇ.3ರಷ್ಟು ಇರಲಿದೆ.

# ದಿ ಮರ್ಚಂಟ್ಸ್ ಅರ್ಬನ್ ಕೋ–ಆಪ್‌ರೇಟಿವ್ ಬ್ಯಾಂಕ್ ಲಿ., ಗದಗ
# 68ನೇ ವಾರ್ಷಿಕ ಸಭೆ, 93 ಲಕ್ಷ ಲಾಭ ಗಳಿಕೆ

**ಗದಗ 23 :** ಸನ್ 2022–23ನೇ ಸಾಲಿನಲ್ಲಿ ದಿ ಮರ್ಚಂಟ್ಸ್ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್ ಲಿ, ಗದಗ 93.12 ಲಕ್ಷ ರೂ. (ಲಾಭ ತೆರಿಗೆ ಅನುವುಗಳ ಮುನ್ನ) ಲಾಭ ಗಳಿಸಿದೆ ಎಂದು ಬ್ಯಾಂಕಿನ ಆಡಳಿತ ಮಂಡಳಿ ಅಧ್ಯಕ್ಷರಾದ ಶ್ರೀ ಕೆ.ಎಸ್. ಚಟ್ಟಿಯವರು ತಿಳಿಸಿದರು.

ಅವರು ರವಿವಾರ ನಗರದ ಶ್ರೀ ಜಗದ್ಗುರು ಪಂಚಾಚಾರ್ಯ ಮಾಂಗಲ್ಯ ಮಂದಿರದಲ್ಲಿ ನಡೆದ ದಿ ಮರ್ಚಂಟ್ಸ್ ಅರ್ಬನ್ ಕೋ–ಆಪ್ ಬ್ಯಾಂಕಿನ 68ನೇ ವಾರ್ಷಿಕ ಸರ್ವ ಸಾಧಾರಣ ಸಭೆಯಲ್ಲಿ ಮಾತನಾಡಿ, ರಿಝರ್ವ ಬ್ಯಾಂಕಿನ ಕಟುನಿಟ್ಟಿನ ಧೋರಣೆಗಳು ದೇಶದ ಆರ್ಥಿಕ ಸಂಕಷ್ಟಗಳ ನಡುವೆಯು ಬ್ಯಾಂಕು 93.12 ಲಕ್ಷ ರೂ. ಲಾಭಗಳಿಸಿದೆ ಎಂದು ತಿಳಿಸಿದರು.

ಬ್ಯಾಂಕಿನ ರಿಝರ್ವ ಮತ್ತು ಇತರೆ ಫಂಡ್ ಮೊತ್ತ ರೂ. 6 ಕೋಟಿ 21 ಲಕ್ಷ ಠೇವಣಿ ಮೊತ್ತ ರೂ. 29 ಕೋಟಿ 90 ಲಕ್ಷ ಸಾಲದ ಮೊತ್ತ ರೂ.20 ಕೋಟಿ 13 ಲಕ್ಷ ಆಗಿದ್ದನ್ನು ತಿಳಿಸಿದರು. ಅಲ್ಲದೇ ಬ್ಯಾಂಕಿನ ವಾರ್ಷಿಕ ವರದಿಯನ್ನು ಮಂಡಿಸಿ ಸಭೆಯ ಅನುಮೋದನೆಯನ್ನು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಕೆ.ಎಸ್. ಚಟ್ಟಿಯವರು ಪಡೆದರು. ಲಾಭ ಹಾನಿಯ ಅಢಾವೆ ಪತ್ರವನ್ನು ಮತ್ತು ಹಿಂದಿನ ವಾರ್ಷಿಕ ಮಹಾಸಭೆಯ ನಡವಳಿಕೆಗಳನ್ನು ಹಾಗೂ ಲೆಕ್ಕಪರಿಶೋಧನೆಯ ಅನುಪಾಲನಾ ವರದಿಯನ್ನು ಬ್ಯಾಂಕಿನ ವ್ಯವಸ್ಥಾಪಕರಾದ ಶ್ರೀಮತಿ ಶೈಲಜಾ ಎನ್. ಹೊಸಂಗಡಿಯವರು ಮಂಡಿಸಿ ಸಭೆಯ ಒಪ್ಪಿಗೆಯನ್ನು ಪಡೆದರು.



ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀ ಚಂದ್ರು ಬಾಳಿಹಳ್ಳಿಮಠ ಸಭೆಯ ಕಾರ್ಯಕ್ರಮದ ನಿರೂಪಣೆ ನಡೆಸಿಕೊಟ್ಟು, ತಾಂತ್ರಿಕ ಕೌಶಲ್ಯದಿಂದ ಇಂದು ಗ್ರಾಹಕರ ನಿರೀಕ್ಷೆ ಮತ್ತು ಅವರ ಸೇವೆಯಲ್ಲಿ ಅಪಾರ ಪರಿವರ್ತನೆ ಬಂದಿದೆ. ದೇಶದಲ್ಲಿ ಖಾಸಗಿ, ರಾಷ್ಟ್ರೀಕೃತ ವಾಣಿಜ್ಯ ಬ್ಯಾಂಕುಗಳ ಪೈಪೋಟಿಯನ್ನು ಪಟ್ಟಣ ಸಹಕಾರ ಬ್ಯಾಂಕುಗಳು ಎದುರಿಸಿ ನಿಲ್ಲಬೇಕಾಗಿದೆ. ಬ್ಯಾಂಕಿನ ಸದಸ್ಯರು ಸಭೆಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಭಾಗವಹಿಸಿ ತಮ್ಮ ಸಲಹೆ ಸೂಚನೆಗಳನ್ನು ನೀಡಿ ಬ್ಯಾಂಕಿನ ಅಭಿವೃದ್ಧಿಗೆ ಕಾರಣಿಭೂತರಾಗಬೇಕು ಮತ್ತು ಸಾಲ ಪಡೆದ ಸದಸ್ಯರು ಕಂತು ಮತ್ತು ಬಡ್ಡಿಯನ್ನು ಬ್ಯಾಂಕಿನ ನಿಯಮಗಳಿಗನುಸಾರವಾಗಿ ಮರುಪಾವತಿಸಿ ಬ್ಯಾಂಕಿನ ಅಭಿವೃದ್ಧಿಗೆ ಸಹಕಾರಿಯಾಗಬೇಕು. ಗ್ರಾಹಕರ ಅಗತ್ಯಗಳ ಸ್ಪಂದನೆಗೆ ಸದಾ ಸಿದ್ಧ ಎಂದು ಶ್ರೀ ಚಂದ್ರು ಜೆ. ಬಾಳಿಹಳ್ಳಿಮಠ ತಿಳಿಸಿದರು.

ಪ್ರಾರಂಭದಲ್ಲಿ ಶ್ರೀ ವೀರಯ್ಯ ಹೊಸಮಠ ಪ್ರಾರ್ಥನೆ ಗೈದರು. ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಕೆ.ಎಸ್. ಚಟ್ಟಿಯವರು ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಕೊನೆಯಲ್ಲಿ ಬ್ಯಾಂಕಿನ ಸದಸ್ಯರಾದ ಶ್ರೀ ಎಲ್.ಬಿ. ತೋಟದವರು ವಂದಿಸಿದರು.

ಸದರಿ ಸಭೆಯಲ್ಲಿ ಅಧ್ಯಕ್ಷರಾದ ಶ್ರೀ ಕೆ.ಎಸ್. ಚೆಟ್ಟಿ, ಉಪಾಧ್ಯಕ್ಷರಾದ ಶ್ರೀ ಚಂದ್ರು ಜೆ. ಬಾಳಿಹಳ್ಳಿಮಠ, ಹಾಗೂ ವೃತ್ತಿಪರ ನಿರ್ದೇಶಕರಾದ ಶ್ರೀ ಎಸ್. ಜಿ. ಪಲ್ಲೇದ, ಹಾಗೂ ನಿರ್ದೇಶಕ ಮಂಡಳಿ ಸದಸ್ಯರಾದ ಶ್ರೀ ಎಸ್.ಜಿ. ಅರಮನಿ, ಶ್ರೀ ಎಸ್.ಎಸ್. ಪಟ್ಟಣಶೆಟ್ಟಿ, ಶ್ರೀ ಎ.ಎಸ್. ಹಂಜಗಿ, ಶ್ರೀ ಎಮ್.ಬಿ. ಶೆಲವಡಿ, ಶ್ರೀ ಎಸ್.ಬಿ. ದೇಸಾಯಿ, ಶ್ರೀ ಎಮ್.ಎಸ್. ಕಂಪಗೌಡರ, ಶ್ರೀ ಎಸ್.ಆರ್. ಭೂಸನೂರಮಠ, ಶ್ರೀ ಎಲ್.ಬಿ. ತೋಟದ, ಶ್ರೀಮತಿ ಎಸ್.ಎಸ್. ಹಲವಾಗಲಿ, ಶ್ರೀಮತಿ ಎಸ್.ಎಸ್. ತಡಸ, ಮಹೇಶ್ವರಿ ಪಾಟೀಲ ಮಹೇಂದ್ರಕರ, ಬ್ಯಾಂಕಿನ ಶಾಸನಬದ್ಧ ಲೆಕ್ಕಪರಿಶೋಧಕರಾದ ಸಿಎ. ಸಿ.ಆರ್. ಡವಳಗಿ, ಕಾನೂನು ಸಲಹೆಗಾರರಾದ ಶ್ರೀಮತಿ ವಿಜಯಾ ಆರ್. ಅಂಗಡಿ, ಶಾನಭಾಗ & ಭೂಸ್ತ ಅಸೋಸಿಯೇಟ್ಸ್, ಶ್ರೀ ವಿಲಾಸ ಕೆ. ರೇವಣಕರ, ಸುವರ್ಣ ಎಸ್. ಶೆಲ್ಲಿಕೇರಿ ಹಾಗೂ ಬ್ಯಾಂಕಿನ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

## ಶ್ರೀ ಲಕ್ಷ್ಮೀ ಮಹಿಳಾ ಸಹಕಾರ ಬ್ಯಾಂಕ್ ನಿ., ಬೆಂಗಳೂರು :
## 29ನೇ ವಾರ್ಷಿಕ ಸರ್ವಸದಸ್ಯರ ಸಭೆ - ಪ್ರತಿಭಾ ಪುರಸ್ಕಾರ ಮತ್ತು ಹಿರಿಯ ಸದಸ್ಯರಿಗೆ ಸನ್ಮಾನ









# ಜ್ಯೂಸ್ ಜಾಕಿಂಗ್ ಮೂಲಕ ವಂಚನೆ
## ಸಿಕ್ಕಸಿಕ್ಕಲ್ಲಿ ಮೊಬೈಲ್ ಚಾರ್ಜಿಂಗ್‌ಗೆ ಹಾಕಿದರೆ... ನಿಮ್ಮ ಖಾತೆಯಲ್ಲಿರುವ ಹಣ ಖಾಲಿ!

ಸ್ಮಾರ್ಟ್‌ಫೋನ್ ಸಂಬಂಧ ಅದೆಷ್ಟೋ ಭದ್ರತಾ ಸಲಹೆಗಳನ್ನು ನೀಡಲಾಗುತ್ತಿದ್ದರೂ ಜನ ಮೋಸ ಹೋಗುತ್ತಲೇ ಇದ್ದಾರೆ. ಅದರಲ್ಲೂ ಸ್ಕ್ಯಾಮರ್‌ಗಳು ಮೋಸ ಮಾಡಲು ಹೊಸ ಹೊಸ ಮಾರ್ಗದ ಮೂಲಕ ಮುನ್ನೆಲೆಗೆ ಬರುತ್ತಿದ್ದು, ಇದೀಗ ಜ್ಯೂಸ್ ಜಾಕಿಂಗ್ (Juice Jacking Scam) ಹಗರಣ ಹೆಚ್ಚಾಗಿದೆ. ಇದರಿಂದಾಗಿ ಬಹಳ ಎಚ್ಚರಿಕೆಯಿಂದ ಸ್ಮಾರ್ಟ್‌ಫೋನ್ ಬಳಕೆ ಮಾಡಬೇಕಿದೆ.

ಹೌದು, ಜನರು ತಮ್ಮ ಬಳಿ ಇರುವ ಸ್ಮಾರ್ಟ್‌ಫೋನ್, ಲ್ಯಾಪ್‌ಟಾಪ್ ಅಥವಾ ಟ್ಯಾಬ್ಲೆಟ್ ಸೇರಿದಂತೆ ಅನೇಕ ಡಿವೈಸ್‌ಗಳಲ್ಲಿ ಬ್ಯಾಟರಿ ಸಾಮರ್ಥ್ಯ ಕಡಿಮೆಯಾದರೆ ತಕ್ಷಣವೇ ಅದನ್ನು ಮರುಭರ್ತಿ ಮಾಡಲು ಮುಂದಾಗುವುದು ಸಾಮಾನ್ಯವಾದ ವಿಷಯ. ಅದರಲ್ಲೂ ಎಲ್ಲಾದರೂ ಹೊರಗಡೆ ಇದ್ದಾಗ ಸ್ಮಾರ್ಟ್‌ಫೋನ್‌ನಲ್ಲಿ ಬ್ಯಾಟರಿ ಸಾಮರ್ಥ್ಯ ಕಡಿಮೆಯಾದರೆ ಸಿಕ್ಕ ಸಿಕ್ಕಲ್ಲಿ ಸಾರ್ವಜನಿಕ ಸ್ಥಳದಲ್ಲಿನ ಚಾರ್ಜಿಂಗ್ ವ್ಯವಸ್ಥೆ ಬಳಕೆ ಮಾಡಲು ಹಲವರು ಮುಂದಾಗುತ್ತಾರೆ.

**ಜ್ಯೂಸ್ ಜಾಕಿಂಗ್ :** ಮನೆ ಅಥವಾ ಕಛೇರಿಯಿಂದ ಹೊರಗಿದ್ದಾಗ ಸಾರ್ವಜನಿಕ ಚಾರ್ಜಿಂಗ್ ಪಾಯಿಂಟ್‌ಗಳ ಅವಲಂಬನೆ ಸಾಮಾನ್ಯವಾಗಿದ್ದು, ಇದು ಜ್ಯೂಸ್ ಜಾಕಿಂಗ್‌ಗೆ ಅವಕಾಶ ಮಾಡಿಕೊಡುತ್ತಿದೆ ಎಂದು ತಿಳಿದುಬಂದಿದೆ. ಈ ನಡುವೆ ಆರ್‌ಬಿಐ ಸಹ ಎಚ್ಚರಿಕೆ ನೀಡಿದ್ದು, ಈ ವಂಚಕರು ಹಲವಾರು ಮಾಹಿತಿಯನ್ನು ಈ ಮೂಲಕ ಕದಿಯುತ್ತಾರೆ ಹಾಗೂ ಇದು ಹಣಕಾಸಿನ ನಷ್ಟಕ್ಕೂ ಕಾರಣವಾಗಬಹುದು ಎಂದು ತಿಳಿಸಿದೆ.

ದುರುದ್ದೇಶಪೂರಿತ ವ್ಯಕ್ತಿಗಳು ಯುಎಸ್‌ಬಿ ಪೋರ್ಟ್‌ಗಳು ಅಥವಾ ಚಾರ್ಜಿಂಗ್ ಕಿಯೋಸ್ಕ್‌ಗಳಂತಹ ಸಾರ್ವಜನಿಕ ಚಾರ್ಜಿಂಗ್ ಸ್ಟೇಷನ್‌ಗಳನ್ನು ದುರ್ಬಳಕೆ ಮಾಡಿಕೊಳ್ಳುತ್ತಿರುವುದು ಇತ್ತೀಚಿನ ದಿನಗಳಲ್ಲಿ ಹೆಚ್ಚಾಗುತ್ತಿದೆ. ಬಳಕೆದಾರರ ಡಿವೈಸ್‌ಗಳಿಂದ ಡೇಟಾವನ್ನು ಕದಿಯಲು ಅಥವಾ ಸೋಂಕು ಉಂಟು ಮಾಡುವ ಕೆಲಸವನ್ನು ಇವರು ಮಾಡುತ್ತಿದ್ದಾರೆ. ಇನ್ನು ಈ ಜ್ಯೂಸ್ ಜಾಕಿಂಗ್ ಎಂಬ ಪದವು ಜ್ಯೂಸ್ ಅನ್ನು ಸಂಯೋಜಿಸುವ ಪದಗಳ ಮೇಲೆಯೇ ಆಧಾರಿತವಾಗಿದೆ. ಅಂದರೆ ವಿದ್ಯುತ್ ಶಕ್ತಿ ಅಥವಾ ಶಕ್ತಿಯ ಗ್ರಾಮ್ಯವಾಗಿ ಕರೆಯಲಾಗುತ್ತದೆ.

**ಇದರಲ್ಲಿ ಏನೆಲ್ಲಾ ಕದಿಯಬಹುದು :** ನೀವು ಸಾರ್ವಜನಿಕ ಪ್ರದೇಶದಲ್ಲಿ ನಿಮ್ಮ ಮೊಬೈಲ್ ಅನ್ನ ಚಾರ್ಜಿಂಗ್‌ಗೆ ಇಟ್ಟಾಗ ವಂಚಕರು ಅಲ್ಲಿ ಸಂಪರ್ಕಗೊಂಡಿರುವ ಫೋನ್‌ಗಳಿಗೆ ಮಾಲ್‌ವೇರ್ ಅನ್ನು ವರ್ಗಾಯಿಸಬಹುದಾಗಿದೆ. ಜೊತೆಗೆ ಮೊಬೈಲ್ ಫೋನ್‌ನಿಂದ ಇಮೇಲ್‌ಗಳು, ಎಸ್‌ಎಮ್‌ಎಸ್, ಉಳಿಸಿದ ಪಾಸ್‌ವರ್ಡ್‌ಗಳು ಇತ್ಯಾದಿಗಳಂತಹ ಡೇಟಾ ಸೂಕ್ಷ್ಮ ಡೇಟಾವನ್ನು ಇವರು ಕದಿಯುತ್ತಾರೆ. ಅದೆಲ್ಲಕ್ಕೂ ಮಿಗಿಲಾಗಿ ಈ ಜ್ಯೂಸ್ ಜಾಕಿಂಗ್ ಸಂಭಾವ್ಯವಾಗಿ ಹಣದ ನಷ್ಟಕ್ಕೆ ಕಾರಣವಾಗಬಹುದು ಎನ್ನಲಾಗಿದೆ. ಪಾಸ್‌ವರ್ಡ್‌ಗಳು, ಕ್ರೆಡಿಟ್ ಕಾರ್ಡ್ ಸಂಖ್ಯೆಗಳು ಅಥವಾ ಬ್ಯಾಂಕಿಂಗ್ ರುಜುವಾತುಗಳಂತಹ ಮಾಹಿತಿಯನ್ನು ಕದಿಯುವುದರಿಂದ ಸುಲಭವಾಗಿ ನಿಮ್ಮ ಬ್ಯಾಂಕ್ ಖಾತೆಯಲ್ಲಿರುವ ಹಣವನ್ನು ಸ್ಕ್ಯಾಮರ್‌ಗಳು ಕದಿಯಬಹುದಾಗಿದೆ. ಅದರಲ್ಲೂ ಜ್ಯೂಸ್ ಜಾಕಿಂಗ್ ಮಾಡಲು ಮುಂದಾಗುವವರು ಮೊದಲು ಹಣದ ವಿಚಾರಕ್ಕೆ ಎಂಟ್ರಿ ಕೊಡುತ್ತಾರೆ.

ಅದರಲ್ಲೂ ಒಮ್ಮೆ ಆಕ್ರಮಣಕಾರರು ನಿಮ್ಮ ಆನ್‌ಲೈನ್ ಬ್ಯಾಂಕಿಂಗ್ ಅಥವಾ ಹಣಕಾಸು ಖಾತೆಗಳಿಗೆ ಒಮ್ಮೆ ಎಂಟ್ರಿ ಕೊಟ್ಟರೆ ಅವರು ಮೋಸದ ವಹಿವಾಟುಗಳನ್ನು ನಡೆಸಲು ಸುಲಭವಾಗುತ್ತದೆ. ಇದರೊಂದಿಗೆ ಅವರು ಖರೀದಿಗಳನ್ನು ಮಾಡಬಹುದು, ನಿಮ್ಮ ಖಾತೆಗಳಿಂದ ಹಣವನ್ನು ವರ್ಗಾಯಿಸಬಹುದು ಅಥವಾ ನಿಮ್ಮ ಹೆಸರಿನಲ್ಲಿ ಹೊಸ ಕ್ರೆಡಿಟ್ ಲೈನ್‌ಗಳನ್ನು ತೆರೆಯಬಹುದು. ಅಷ್ಟಕ್ಕೂ ಈ ಜ್ಯೂಸ್ ಜಾಕಿಂಗ್ ಹೇಗೆ ಕಳ್ಳರಿಗೆ ಸಹಾಯಕ



ಎಂಬುದನ್ನು ತಿಳಿಯೋಣ ಬನ್ನಿ.

**ಟ್ರ್ಯಾಪ್ ಹೊಂದಿಸುತ್ತಾರೆ :** ರೈಲು ನಿಲ್ದಾಣಗಳು, ಹೋಟೆಲ್‌ಗಳು ಅಥವಾ ಇತರ ಜನನಿಬಿಡ ಪ್ರದೇಶಗಳಲ್ಲಿ ಜನರು ತಮ್ಮ ಡಿವೈಸ್‌ಗಳನ್ನು ಚಾರ್ಜಿಂಗ್ ಹಾಕುವ ಸಾಧ್ಯತೆ ಹೆಚ್ಚಾಗಿಯೇ ಇರುತ್ತದೆ. ಈ ಕಾರಣಕ್ಕೆ ಇಲ್ಲಿ ಆಕ್ರಮಣಕಾರರು ದುರುದ್ದೇಶಪೂರಿತ ಸಾಫ್ಟ್‌ವೇರ್ ಅಥವಾ ಹಾರ್ಡ್‌ವೇರ್ ಅನ್ನು ಸಾರ್ವಜನಿಕ ಚಾರ್ಜಿಂಗ್ ಸ್ಟೇಷನ್‌ನಲ್ಲಿ ಇನ್‌ಸ್ಟಾಲ್ ಮಾಡುತ್ತಾರೆ.

**ಪ್ರಚೋದನೆಗೊಳಿಸಬಹುದು :** ಕೆಲವು ಕಡೆ ನೀವು ಗಮನಿಸಿರಬಹುದು. 'ಇಲ್ಲಿ ಉಚಿತ ಚಾರ್ಜಿಂಗ್ ಸೌಲಭ್ಯ ಲಭ್ಯ ಇದೆ' ಎಂದು ಲೇಬಲ್ ಮಾಡಲಾಗಿರುತ್ತದೆ. ಅದರಲ್ಲೂ ಇದನ್ನು ಯಾರೇ ಆದರೂ ಬಳಕೆ ಮಾಡಲು ಮುಂದೆ ಬರುವಂತೆ ಪ್ರಲೋಭಿಸಲು ಅಧಿಕೃತ ಚಾರ್ಜಿಂಗ್ ಪಾಯಿಂಟ್‌ನಂತೆ ಕಾಣುವಂತೆ ಅದನ್ನು ಮಾಡಿರುತ್ತಾರೆ. ಈ ಸ್ಟೋರ್‌ಗಳ ಬಗ್ಗೆ ಎಚ್ಚರಿಕೆ ವಹಿಸುವುದು ಅನಿವಾರ್ಯ.

ಡೇಟಾ ಕಳ್ಳತನ, ಮಾಲ್‌ವೇರ್ ಇನ್‌ಸ್ಟಾಲ್: ಮೊದಲೇ ತಿಳಿಸಿದಂತೆ ಈ ಜ್ಯೂಸ್ ಜಾಕಿಂಗ್‌ನ ಮೊದಲ ಕೆಲಸ ಯುಎಸ್‌ಬಿ ಕೇಬಲ್ ಮೂಲಕ ಸಂಪರ್ಕಿಸಿದಾಗ, ಸ್ಟೇಷನ್‌ನಲ್ಲಿರುವ ದುರುದ್ದೇಶಪೂರಿತ ಸಾಫ್ಟ್‌ವೇರ್ ಅಥವಾ ಹಾರ್ಡ್‌ವೇರ್ ಡಿವೈಸ್‌ಗಳಿಗೆ ಎಂಟ್ರಿ ಕೊಡುತ್ತದೆ. ಇದರಿಂದ ಪಾಸ್‌ವರ್ಡ್‌ಗಳು, ಫೋಟೋಗಳು, ಸಂಪರ್ಕಗಳು ಅಥವಾ ಇತರ ವೈಯಕ್ತಿಕ ಮಾಹಿತಿಯಂತಹ ಸೂಕ್ಷ್ಮ ಡೇಟಾವನ್ನು ಕದಿಯುತ್ತದೆ. ಅದರಲ್ಲೂ ಮಾಲ್‌ವೇರ್ ಏನಾದರೂ ಫೋನ್‌ನಲ್ಲಿ ಇನ್‌ಸ್ಟಾಲ್ ಆದರೆ ಚಾರ್ಜಿಂಗ್ ಸ್ಟೇಷನ್‌ನಿಂದ ಸಂಪರ್ಕ ಕಡಿತಗೊಂಡ ನಂತರವೂ ಡಿವೈಸ್ ಅನ್ನು ದೂರದಿಂದಲೇ ಕಂಟ್ರೋಲ್ ಮಾಡುವ ಆಯ್ಕೆಯನ್ನು ಈ ಆಕ್ರಮಣಕಾರರು ಪಡೆದಿರುತ್ತಾರೆ. ಈ ಕಾರಣಕ್ಕೆ ನೀವು ಎಂದಿಗೂ ಸಾರ್ವಜನಿಕ ಚಾರ್ಜಿಂಗ್ ಸ್ಟೇಷನ್‌ಗಳಿಗೆ ಮೊದಲ ಆದ್ಯತೆ ನೀಡಬೇಡಿ. ಅಷ್ಟಕ್ಕೂ ಚಾರ್ಜಿಂಗ್ ಮಾಡಲೇಬೇಕು ಎಂದರೆ ನಿಮ್ಮದೇ ಚಾರ್ಜರ್ ಬಳಕೆ ಮಾಡಿ.

ಹೆಚ್ಚುವರಿ ರಕ್ಷಣೆ ಉದ್ದೇಶದಿಂದ ಪಾಸ್‌ಕೋಡ್‌ಗಳು, ಫಿಂಗರ್‌ಪ್ರಿಂಟ್‌ಗಳು ಅಥವಾ ಮುಖದ ಗುರುತಿಸುವಿಕೆಯಂತಹ ನಿಮ್ಮ ಡಿವೈಸ್‌ನ ಭದ್ರತಾ ಫೀಚರ್ಸ್‌ಗಳನ್ನು ಸಕ್ರಿಯಗೊಳಿಸಿ.ಸಾರ್ವಜನಿಕ ವೈ-ಫೈ ನೆಟ್‌ವರ್ಕ್‌ಗಳನ್ನು ಬಳಸುವಾಗ ಜಾಗರೂಕರಾಗಿರಿ, ಅವು ಭದ್ರತಾ ಅಪಾಯಗಳನ್ನು ಹೆಚ್ಚಾಗಿ ಉಂಟುಮಾಡಬಹುದು. ಇದರೊಂದಿಗೆ ಅಸುರಕ್ಷಿತ ನೆಟ್‌ವರ್ಕ್‌ಗಳಲ್ಲಿ ಸೂಕ್ಷ್ಮ ಮಾಹಿತಿಯನ್ನು ಪ್ರವೇಶಿಸುವುದನ್ನು ಅಥವಾ ಹಣಕಾಸಿನ ವಹಿವಾಟುಗಳನ್ನು ನಡೆಸುವುದನ್ನು ತಪ್ಪಿಸಿ.

# ರೂ. 500 ಉಳಿಸಲು ಹೋಗಿ 6 ಲಕ್ಷ ಕಳೆದುಕೊಂಡ ವ್ಯಾಪಾರಿ

**ಕೆಲವು ದಿನಗಳ ಬಳಿಕ ಸೌರಭ್ ಶರ್ಮಾ ಎಂಬಾತನಿಂದ ರಾಜೇಶ್ ಅವರಿಗೆ ದೂರವಾಣಿ ಕರೆ ಬಂತು. ತಾನು ಆಕ್ಸಿಸ್ ಬ್ಯಾಂಕ್‌ನ ನೌಕರ ಎಂದು ಹೇಳಿ ಪರಿಚಯ ಮಾಡಿಕೊಂಡ ಆತ, ನೀವು ಏಕೆ ಇನ್ನೂ ಕಾರ್ಡ್ ಆಕ್ಟಿವೇಟ್ ಮಾಡಿಕೊಂಡಿಲ್ಲ ಎಂದು ಪ್ರಶ್ನಿಸಿದ. ಆಗ ರಾಜೇಶ್ 500 ರೂ. ವಾರ್ಷಿಕ ಶುಲ್ಕ ಹೆಚ್ಚಾಯ್ತು. ಹೀಗಾಗಿ, ನಾನು ಅಷ್ಟು ಹಣ ಕೊಡಲು ತಯಾರಿಲ್ಲ ಎಂದು ಹೇಳಿದರು. ಆಗ ಸೌರಬ್ ಶರ್ಮಾ ಎಂದು ಹೇಳಿಕೊಂಡ ವ್ಯಕ್ತಿ ಮತ್ತೊಂದು ಆಫರ್ ಮುಂದಿಟ್ಟ. ಕೆಲವು ಡೀಟೇಲ್ಸ್ ಕೊಡಿ, ಜಿಮೇಲ್ ವೆರಿಫಿಕೇಷನ್ ಅಪ್‌ಡೇಟ್ ಮಾಡಿ, ನಿಮಗೆ ಉಚಿತವಾಗಿ ಕಾರ್ಡ್ ಆಕ್ಟಿವೇಟ್ ಆಗುತ್ತೆ ಎಂದು ಹೇಳಿದ.**

**ವಡೋದರಾ :** ಆತ ಮೆಡಿಕಲ್ ಸ್ಟೋರ್ ವ್ಯಾಪಾರಿ. ಕ್ರೆಡಿಟ್ ಕಾರ್ಡ್ ಹೊಂದಿದ್ದ. ಪ್ರತಿ ವರ್ಷ ಕ್ರೆಡಿಟ್ ಕಾರ್ಡ್‌ನ ವಾರ್ಷಿಕ ಶುಲ್ಕ ಕಟ್ಟಬೇಕು. ಆದ್ರೆ, ಈ ಬಾರಿ ಆತನಿಗೆ ಹೊಸ ಆಫರ್ ಒಂದು ಬಂದಿತ್ತು. ಕ್ರೆಡಿಟ್ ಕಾರ್ಡ್‌ನ ವಾರ್ಷಿಕ ಶುಲ್ಕ 500 ರೂ. ಕಟ್ಟೋದನ್ನ ತಪ್ಪಿಸಿ, ಹಣ ಉಳಿಸಿ ಎಂಬ ಆಫರ್ ಅದು. ಈ ಆಫರ್ ತನ್ನದಾಗಿಸಿಕೊಳ್ಳೋಕೆ ಹೋಗಿ ಈತ 6 ಲಕ್ಷ ರೂ. ಕಳೆದುಕೊಂಡಿದ್ದಾನೆ!

ಗುಜರಾತ್ ರಾಜ್ಯದ ವಡೋದರಾ ನಗರದ ವ್ಯಾಪಾರಿ ರಾಜೇಶ್ ರಾಥ್ವಾ ಅವರೇ ಮೋಸ ಹೋದವರು. ಸೈಬರ್ ಕ್ರೈಂ ಕ್ರಿಮಿನಲ್‌ಗಳ ಗುಂಪು ರಾಜೇಶ್ ಅವರ ಹೆಸರಿನಲ್ಲಿ 6.20 ಲಕ್ಷ ರೂ. ಸಾಲ ಪಡೆದಿದ್ದಾರೆ. ಕ್ರೆಡಿಟ್ ಕಾರ್ಡ್‌ನ ವಾರ್ಷಿಕ ಶುಲ್ಕ ಉಳಿಸಲು ಫಾರಂ ಭರ್ತಿ ಮಾಡಿ ಎಂದು ಹೇಳಿ ಯಾಮಾರಿಸಿದ ಸೈಬರ್ ಕ್ರಿಮಿನಲ್‌ಗಳು 6.20 ಲಕ್ಷ ರೂ ಹಣ ಎಗರಿಸಿದ್ದಾರೆ. ಹೀಗಾಗಿ, ತಾನು ಪಡೆಯದ ಸಾಲವನ್ನು ಇದೀಗ ರಾಜೇಶ್ ಅವರು ಮರು ಪಾವತಿ ಮಾಡಬೇಕಿದೆ. ಅದೂ ಕೂಡಾ ಬಡ್ಡಿ ಸಮೇತ!

### ರಾಜೇಶ್ ಮೋಸ ಹೋಗಿದ್ದು ಹೇಗೆ?

ರಾಜೇಶ್ ಅವರು ಗುಜರಾತ್‌ನ ವಡೋದರಾದ ಭಯಾಲಿ ಎಂಬ ಪಟ್ಟಣದಲ್ಲಿ ನೆಲೆಸಿದ್ದಾರೆ. ಸೈಬರ್ ಕ್ರೈಂ ಬಲಿಪಶು ಆಗಿರುವ ಅವರು ತಮ್ಮ ಮನೆಯ ವ್ಯಾಪ್ತಿಯ ಪೊಲೀಸ್ ಠಾಣೆಯಲ್ಲಿ ಈ ಸಂಬಂಧ ದೂರು ದಾಖಲಿಸಿದ್ದಾರೆ. ಆಕ್ಸಿಸ್ ಬ್ಯಾಂಕ್‌ನ ಕ್ರೆಡಿಟ್ ಕಾರ್ಡ್ ಸಿಬ್ಬಂದಿ ಎಂದು ಹೇಳಿ ಕರೆ ಮಾಡಿದ ಆಗುಂತಕರು, ರಾಜೇಶ್ ಅವರಿಗೆ ಆಫರ್ ಒಂದನ್ನು ಒಟ್ಟರು. ಕಾರ್ಡ್‌ನಿಮ್ಮ ಮನೆಗೆ ಅಂಚೆಯಲ್ಲಿ ಬರುತ್ತದೆ. ಸ್ವೀಕರಿಸಿ ಎಂದು ಹೇಳಿದ್ದರು. ಆದ್ರೆ, ಕಾರ್ಡ್ ಆಕ್ಟಿವೇಟ್ ಮಾಡಲು 500 ರೂ. ವಾರ್ಷಿಕ ಶುಲ್ಕ ವಿಧಿಸಿದ್ದರು. ಹೀಗಾಗಿ, ರಾಜೇಶ್ ಈ ಕಾರ್ಡ್ ಆಕ್ಟಿವೇಟ್ ಮಾಡಿರಲಿಲ್ಲ.

ಕೆಲವು ದಿನಗಳ ಬಳಿಕ ಸೌರಭ್ ಶರ್ಮಾ ಎಂಬಾತನಿಂದ ರಾಜೇಶ್ ಅವರಿಗೆ ದೂರವಾಣಿ ಕರೆ ಬಂತು. ತಾನು ಆಕ್ಸಿಸ್ ಬ್ಯಾಂಕ್‌ನ ನೌಕರ ಎಂದು ಹೇಳಿ ಪರಿಚಯ ಮಾಡಿಕೊಂಡ ಆತ, ನೀವು ಏಕೆ ಇನ್ನೂ ಕಾರ್ಡ್ ಆಕ್ಟಿವೇಟ್ ಮಾಡಿಕೊಂಡಿಲ್ಲ ಎಂದು ಪ್ರಶ್ನಿಸಿದ. ಆಗ ರಾಜೇಶ್ 500 ರೂ. ವಾರ್ಷಿಕ ಶುಲ್ಕ ಹೆಚ್ಚಾಯ್ತು. ಹೀಗಾಗಿ, ನಾನು ಅಷ್ಟು ಹಣ ಕೊಡಲು ತಯಾರಿಲ್ಲ ಎಂದು ಹೇಳಿದರು. ಆಗ ಸೌರಬ್ ಶರ್ಮಾ ಎಂದು ಹೇಳಿಕೊಂಡ ವ್ಯಕ್ತಿ ಮತ್ತೊಂದು ಆಫರ್ ಮುಂದಿಟ್ಟ. ಕೆಲವು ಡೀಟೇಲ್ಸ್ ಕೊಡಿ, ಜಿಮೇಲ್ ವೆರಿಫಿಕೇಷನ್ ಅಪ್‌ಡೇಟ್ ಮಾಡಿ, ನಿಮಗೆ ಉಚಿತವಾಗಿ ಕಾರ್ಡ್ ಆಕ್ಟಿವೇಟ್ ಆಗುತ್ತೆ ಎಂದು ಹೇಳಿದ.




ಉಚಿತವಾಗಿ ಕಾರ್ಡ್ ಆಕ್ಟಿವೇಟ್ ಆಗುವಂತಿದ್ದರೆ ನಾನು ಡೀಟೇಲ್ಸ್ ಕೊಡುವೆ ಎಂದು ಒಪ್ಪಿದ ರಾಜೇಶ್, ಆತ ಕೇಳಿದ ಎಲ್ಲ ಮಾಹಿತಿಗಳನ್ನೂ ಕೊಟ್ಟರು. ಈ ವೇಳೆ ರಾಜೇಶ್ ಅವರ ಖಾತೆಗೆ ಮೂರು ಕಂತುಗಳಲ್ಲಿ ಒಟ್ಟು 6.20 ಲಕ್ಷ ರೂ. ಹಣ ಜಮೆ ಆಯ್ತು. ಇದರಿಂದ ಅಚ್ಚರಿಗೆ ಒಳಗಾದ ರಾಜೇಶ್, ತಮ್ಮ ಖಾತೆಗೆ ಲಕ್ಷಾಂತರ ರೂಪಾಯಿ ಹಣ ಬಂದಿದೆ ಎಂದು ಹೇಳಿದರು. ಆಗ ಕರೆ ಮಾಡಿದ ವ್ಯಕ್ತಿ ನಮ್ಮ ಬ್ಯಾಂಕಿನ ತಾಂತ್ರಿಕ ದೋಷದಿಂದ ಈ ರೀತಿ ತಪ್ಪಾಗಿದೆ, ಹಣ ವಾಪಸ್ ಪಡೆಯುತ್ತೇವೆ ಎಂದು ಹೇಳಿದ.

ತಪ್ಪಾಗಿ ನಿಮ್ಮ ಖಾತೆಗೆ ಸಾಲ ಸಿಕ್ಕಿ ಬಿಟ್ಟಿದೆ. ಹೀಗಾಗಿ, ನಾವು ಸಾಲದ ಹಣವನ್ನು ವಾಪಸ್ ಪಡೆಯುತ್ತಿದ್ದೇವೆ ಎಂದು ಮಾಹಿತಿ ನೀಡಿದ ಆತ ಮತ್ತೆ 3 ಕಂತುಗಳಲ್ಲಿ ಹಣ ಖಾತೆಯಿಂದ ಮಾಯವಾಯ್ತು. ಇದಾದ ಬಳಿಕ ಮತ್ತೆ ಕರೆ ಮಾಡಿದ ಅದೇ ವ್ಯಕ್ತಿ, ನಿಮ್ಮ ಹೆಸರಲ್ಲಿ ಮಂಜೂರಾಗಿದ್ದ ಸಾಲ ರದ್ದಾಗಿರುವುದಾಗಿ ಮಾಹಿತಿ ಬಂದಿತು. ಇಷ್ಟೆಲ್ಲಾ ಆದ ಬಳಿಕ ರಾಜೇಶ್ ತಮ್ಮ ಬ್ಯಾಂಕಿನ ಆಪ್ ತೆರೆದು ನೋಡಿದರೆ ನೀವು ಈ ತಿಂಗಳು 10 ಸಾವಿರ ರೂ. ಇಎಂಐ ಪಾವತಿ ಮಾಡಬೇಕು ಎಂಬ ಸಂದೇಶ ಬಂದಿತ್ತು. ಆಗ ರಾಜೇಶ್‌ಗೆ ತಾವು ಮೋಸ ಹೋಗಿದ್ದು ಗೊತ್ತಾಯ್ತು. ರಾಜೇಶ್ ಹೆಸರಲ್ಲಿ ಸಾಲ ಪಡೆದಿದ್ದ ಸೈಬರ್ ವಂಚಕರು, ರಾಜೇಶ್ ಖಾತೆಯಲ್ಲಿ ಇದ್ದ ಹಣವನ್ನು ತಮ್ಮ ಖಾತೆಗೆ ವರ್ಗಾಯಿಸಿಕೊಂಡಿದ್ದರು.

ಇದೀಗ ಪೊಲೀಸರು ರಾಜೇಶ್ ಖಾತೆಯಲ್ಲಿ ಇದ್ದ ಹಣ ಯಾರ ಖಾತೆಗೆ ಹೋಗಿದೆ ಎಂದು ಪತ್ತೆ ಮಾಡುವ ಕಾರ್ಯದಲ್ಲಿ ತೊಡಗಿದ್ದಾರೆ. ಕ್ರೆಡಿಟ್ ಕಾರ್ಡ್ ಬಂದಿದ್ದು ಹೇಗೆ? ಅದರ ಮಾಹಿತಿ ಸೈಬರ್ ವಂಚಕರಿಗೆ ಹೇಗೆ ಸಿಕ್ಕಿತು ಅನ್ನೋದ್ರ ತನಿಖೆಯೂ ನಡೆಯುತ್ತಿದೆ.

# ನಿಮ್ಮ ಪ್ರಶ್ನೆ ನಮ್ಮ ಉತ್ತರ






▸▸ ಸುಧಾಕರ್ ಭಟ್, ಬ್ಯಾಂಕಿಂಗ್ ಸಲಹೆಗಾರರು.

**01. ನಮ್ಮ ಬ್ಯಾಂಕಿನಲ್ಲಿ ಕೆಲವು ಭದ್ರತೆ ಇಲ್ಲದ ಹಳೆಯ ಸುಸ್ತಿ ಸಾಲದ ಖಾತೆಗಳಿವೆ. ಆ ಖಾತೆಗಳಿಗೆ ಪೂರ್ಣ ಪ್ರಮಾಣದ ಅನುವು ಮಾಡಲಾಗಿದೆ. ಆ ಸಾಲಗಾರರಲ್ಲಿ ಕೆಲವರು ಒನ್ ಟೈಮ್ ಸೆಟಲ್‌ಮೆಂಟ್ ಸ್ಕೀಮ್ (ಒ.ಟಿ.ಎಸ್.) ಮಾಡಲು ಮುಂದಾಗಿದ್ದಾರೆ. ಅವರು ಕೇವಲ ಅಸಲನ್ನು ಮಾತ್ರಕೊಡಲು ಮುಂದಾಗಿದ್ದಾರೆ. ಮಹಾಮಂಡಳದಿಂದ ಬಂದ ಮಾದರಿ ನೀತಿಯಲ್ಲಿ ಎಲ್ಲಾ ಸುಸ್ತಿಸಾಲಗಾರರಿಂದ ಅಸಲು ಮತ್ತು ಸ್ವಲ್ಪ ಬಡ್ಡಿಯನ್ನು ವಸೂಲು ಮಾಡಬೇಕು ಎಂದು ಹೇಳಿದೆ. ಸುಸ್ತಿ ಸಾಲಗಳು ತುಂಬಾ ಹಳೆಯದಾಗಿದ್ದು ಯಾವುದೇ ಭದ್ರತೆ ಇಲ್ಲದಿರುವುದರಿಂದ ಸಾಲಗಾರರು ಯಾವುದೇ ಬಡ್ಡಿಕೊಡಲು ಸಿದ್ಧರಿಲ್ಲ. ಅವರಿಗೆ ಒ.ಟಿ.ಎಸ್. ಕೊಡುವ ಬಗೆ ಹೇಗೆ?**

**▸▸ ಪಟ್ಟಣ ಸಹಕಾರ ಬ್ಯಾಂಕ್ ಲಿ., ವಿಜಯಪುರಜಿಲ್ಲೆ.**

**ಉತ್ತರ** : ಭಾರತೀಯ ರಿಜರ್ವ್ ಬ್ಯಾಂಕು ಒ.ಟಿ.ಎಸ್. ನೀಡುವ ಸಂದರ್ಭದಲ್ಲಿ ಪಡೆಯಬೇಕಾದ ಕನಿಷ್ಠ ಮೊತ್ತದ ಬಗ್ಗೆ ಹೇಳಿಲ್ಲ. ಮಹಾಮಂಡಳ ತಯಾರಿಸಿದ ಮಾದರಿ ನೀತಿಯನ್ನು ತುಂಬ ಸರಳವಾಗಿ ಇಡಲಾಗಿದೆ. ಬ್ಯಾಂಕುಗಳು ಸಂದರ್ಭಾನುಸಾರ ನೀತಿಯಲ್ಲಿ ಬದಲಾವಣೆ ಮಾಡಬಹುದಾಗಿದೆ. ಬ್ಯಾಂಕು ಲಾಸ್ ವರ್ಗದಲ್ಲಿರುವ ಸುಸ್ತಿ ಸಾಲಗಳಿಗೆ ಮಾತ್ರ ಒ.ಟಿ.ಎಸ್. ನೀಡುತ್ತಿದ್ದರೆ ಕೇವಲ ಅಸಲನ್ನು ಮಾತ್ರ ಪಾವತಿಸಿದರೆ ಸಾಕು ಎಂದು ತಿದ್ದುಪಡಿ ಮಾಡಿಕೊಳ್ಳಬಹುದಾಗಿದೆ.

**02. ನಮ್ಮ ಬ್ಯಾಂಕು ಸರ್ಕಾರದ ಭದ್ರತಾ ಪತ್ರದಲ್ಲಿ ಹೂಡಿಕೆ ಮಾಡಿದೆ. ಎಲ್ಲಾ ಹೂಡಿಕೆ ಹೆಲ್ಡ್‌ಟು ಮೆಚುರಿಟಿ (HTM) ವರ್ಗದಲ್ಲಿದೆ. ಸ್ವಲ್ಪ ಮೊತ್ತವನ್ನು ಹೂಡಿಕೆ ಏರಿಳಿತ ಮೀಸಲು (IFR)ನಲ್ಲಿ ಇರಿಸಿದ್ದೇವೆ. ಬ್ಯಾಂಕುಗಳು ತಮ್ಮಒಟ್ಟು ಹೂಡಿಕೆಯ ಶೇ.5ರಷ್ಟನ್ನು ಹೂಡಿಕೆ ಏರಿಳಿತ ಮೀಸಲಿನಲ್ಲಿ ಇಡುವ ಅಗತ್ಯವಿದೆಯೇ? ಈ ಬಗ್ಗೆ ನಮಗೆ ಸಲಹೆ ನೀಡಿ.**

**– ಮರ್ಚಂಟ್ಸ್ ಲಿಬರಲ್ ಕೋ–ಆಪರೇಟಿವ್ ಬ್ಯಾಂಕ್ ಲಿ., ಗದಗ**

**ಉತ್ತರ** : ಪಟ್ಟಣ ಸಹಕಾರ ಬ್ಯಾಂಕುಗಳು ಮಾರಾಟಕ್ಕೆ ಲಭ್ಯವಿರುವ (AFS) ನಲ್ಲಿ ಮತ್ತು ವ್ಯವಹಾರಕ್ಕಾಗಿ ಇಟ್ಟ (HFT) ವರ್ಗಗಳಲ್ಲಿ ಇರಿಸಿದ ಸರ್ಕಾರದ ಭದ್ರತಾ ಪತ್ರ ಮತ್ತು ಇತರ ಹೂಡಿಕೆಗಳ ಮೇಲೆ ಶೇ.5ರಷ್ಟು ಹೂಡಿಕೆ ಏರಿಳಿತ ಮೀಸಲು (IFR) ಮಾಡಬೇಕು. ನಿಮ್ಮ ಎಲ್ಲಾ ಹೂಡಿಕೆ ಹೆಲ್ಡ್‌ಟು ಮೆಚುರಿಟಿ (HTM) ವರ್ಗದಲ್ಲಿದ್ದರೆ ಹೂಡಿಕೆ ಏರಿಳಿತ ಮೀಸಲು (IFR) ಮಾಡುವ ಅಗತ್ಯವಿಲ್ಲ. ಬ್ಯಾಂಕು ಮ್ಯೂಚುವಲ್ ಫಂಡ್ ಅಥವಾ ಇನ್ನಿತರೆ ನಾನ್ ಎಸ್‌ಎಲ್‌ಆರ್ ಹೂಡಿಕೆ ಮಾಡಿದರೆ ಅದರ ಮೇಲೆ ಕೂಡಾ ಶೇ.5ರಷ್ಟು ಹೂಡಿಕೆ ಏರಿಳಿತ ಮೀಸಲು ಮಾಡಬೇಕು.

## ನಕ್ಷತ್ರ ಚಿಹ್ನೆ ಹೊಂದಿರುವ ನೋಟುಗಳು ಕೂಡ ಮಾನ್ಯತೆ ಹೊಂದಿವೆ : ರಿಸರ್ವ್ ಬ್ಯಾಂಕ್ ಸ್ಪಷ್ಟೀಕರಣ

**ನವದೆಹಲಿ** : ಮುಂದಿನ ಬಾರಿ ನೋಟುಗಳ ಸಂಖ್ಯೆ ಫಲಕದಲ್ಲಿ ನಕ್ಷತ್ರ ಚಿಹ್ನೆ (*) ಚಿಹ್ನೆ ಹೊಂದಿರುವ ಬ್ಯಾಂಕ್ ನೋಟನ್ನು ನೀವು ಕಂಡುಕೊಂಡರೆ, ನೀವು ಚಿಂತಿಸಬೇಕಾಗಿಲ್ಲ. ನಕ್ಷತ್ರ ಚಿಹ್ನೆ ಹೊಂದಿರುವ ಬ್ಯಾಂಕ್ ನೋಟುಗಳು ಕಾನೂನುಬದ್ಧವಾಗಿ ಮಾನ್ಯವಾಗಿವೆ. ಈ ನೋಟುಗಳ ಬಗ್ಗೆ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಸ್ಪಷ್ಟನೆ ನೀಡಿದೆ.




ನಕ್ಷತ್ರ ಚಿಹ್ನೆಯಿಲ್ಲದ ಬ್ಯಾಂಕ್ ನೋಟಿನಂತೆಯೇ ನಕ್ಷತ್ರ ಚಿಹ್ನೆ ಹೊಂದಿರುವ ಬ್ಯಾಂಕ್ ನೋಟು ಕಾನೂನುಬದ್ಧವಾಗಿದೆ ಎಂದು ಆರ್‌ಬಿಐ ಹೇಳಿದೆ. ಬ್ಯಾಂಕ್ ನೋಟಿನ ಪೂರ್ವಪ್ರತ್ಯಯ ಮತ್ತು ಸರಣಿ ಸಂಖ್ಯೆಯ ನಡುವೆ ನಕ್ಷತ್ರ ಚಿಹ್ನೆಯನ್ನು ಸೇರಿಸಲಾಗಿದೆ ಎಂದು ಆರ್‌ಬಿಐ ತಿಳಿಸಿದೆ. ನಕ್ಷತ್ರ ಚಿಹ್ನೆಯನ್ನು ಹೊಂದಿರುವ ನೋಟು, ಹಾನಿಗೊಳಗಾದ ನಂತರ ಅದೇ ಸಂಖ್ಯೆ ಮತ್ತು ಪೂರ್ವಪ್ರತ್ಯಯದೊಂದಿಗೆ ನಕ್ಷತ್ರ ಚಿಹ್ನೆಯನ್ನು ಸೇರಿಸುವ ಮೂಲಕ ನೋಟನ್ನು ಬದಲಾಯಿಸಲಾಗಿದೆಯೇ ಅಥವಾ ಮರುಮುದ್ರಣ ಮಾಡಲಾಗಿದೆಯೇ ಎಂದು ಗುರುತಿಸುತ್ತದೆ.

ಅದ ಸ್ಟಾರ್ ಚಿಹ್ನೆಗಳನ್ನು ಹೊಂದಿರುವ ಬ್ಯಾಂಕ್ ನೋಟುಗಳ ಸಿಂಧುತ್ವದ ಬಗ್ಗೆ ಸಾಮಾಜಿಕ ಮಾಧ್ಯಮಗಳಲ್ಲಿ ಚರ್ಚೆಗಳ ನಂತರ ಆರ್‌ಬಿಐ ಈ ಸ್ಪಷ್ಟೀಕರಣವನ್ನು ನೀಡಿದೆ. ಬ್ಯಾಂಕ್ ನೋಟುಗಳ ಸಂಖ್ಯೆ ಫಲಕದಲ್ಲಿ ನಕ್ಷತ್ರ ಚಿಹ್ನೆಯನ್ನು ಸೇರಿಸಲಾಗಿದೆ ಎಂದು ಆರ್‌ಬಿಐ ತಿಳಿಸಿದೆ. ಹಾನಿಗೊಳಗಾದ ನೋಟುಗಳಿಗೆ ಬದಲಾಗಿ ಮುದ್ರಿಸಲಾಗುವ ನೋಟುಗಳು ಇವು. ನಕ್ಷತ್ರ ಚಿಹ್ನೆಯನ್ನು ಹೊಂದಿರುವ ಈ ನೋಟುಗಳನ್ನು ಸರಣಿ ಸಂಖ್ಯೆಯೊಂದಿಗೆ 100 ತುಣುಕುಗಳಲ್ಲಿ ಮುದ್ರಿಸಲಾಗುತ್ತದೆ.

## ಒನ್‌ಲೈನ್ ನ್ಯೂಸ್

ಈ ಪುಟದಲ್ಲಿನ ಸುದ್ದಿಗಳನ್ನು ಓದಿದ್ದೀರಾ...?
**ಕುತೂಹಲಕಾರಿಯಾದ ಸುದ್ದಿಗಳು** ನಿಮ್ಮ ಕಣ್ಣು ತಪ್ಪಿದ್ದರೆ, ಇಲ್ಲಿವೆ ಓದಿ.

- ನಾಲ್ಕು ಗೋಡೆಗಳ ಮಧ್ಯೆ ಪಾಠ ಕಲಿಯುತ್ತಿದ್ದ 82 ವಿದ್ಯಾರ್ಥಿಗಳು, ಗದ್ದೆ ಅಂದರೇನು, ಬೇಸಾಯ ಎಂದರೇನು ಅನ್ನುವುದನ್ನು ದಕ್ಷಿಣ ಕನ್ನಡದ ಜ್ಯೋತಿ ಜೆ.ಪೈ ಅವರ ಮನೆಯ ಗದ್ದೆಗೆ ಇಳಿದು ಹಾಡುತ್ತ ನಾಟಿ ಮಾಡಿ ಕೃಷಿ ಚಟುವಟಿಕೆಯ ಮಾಹಿತಿ ಪಡೆದುಕೊಂಡರು.
- ಮಾರತ್ತಹಳ್ಳಿಯ ಬಡ ಮಹಿಳೆಯರು ಸಾಮಾಜಿಕ ಜವಾಬ್ದಾರಿಯ ಅರಿಯಲು ಒಟ್ಟಾರೆಯಾಗಿ ಸೇರೋಣ ತಂಡ ಹೇಳಿಕೊಡುತ್ತಿರುವ ಕಲೆಯ ಮೂಲಕ ಸಬಲೀಕರಣಗೊಳ್ಳುತ್ತಿದ್ದಾರೆ, ಇದರಿಂದ ಅವರ ಸಾಮಾಜಿಕ, ಆರ್ಥಿಕ, ಆರೋಗ್ಯ, ಜೀವನಶೈಲಿ ಬದಲಾಗಿದೆ.
- ಕ್ಷುಲ್ಲಕ ಕಾರಣಕ್ಕೆ ಜಗಳವಾಡಿದ ಎರಡು ಕುಟುಂಬಗಳ ಸದಸ್ಯರು ತಮ್ಮ ಪ್ರದೇಶದಲ್ಲಿ 400 ಸಸಿಗಳನ್ನು ನೆಡುವ ಮೂಲಕ ತಮ್ಮೊಳಗಿನ ನಕಾರಾತ್ಮಕ ಆಲೋಚನೆ ಕೊನೆಗೊಳಿಸುವಂತೆ ಹಾಗೂ ಅವುಗಳನ್ನು ಐದು ವರ್ಷಗಳವರೆಗೆ ನೋಡಿಕೊಳ್ಳುವಂತೆ ದೆಹಲಿ ನ್ಯಾಯಾಲಯ ಹೇಳಿದೆ.
- ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ಕಾರ್ಮಿಕರ ಮಕ್ಕಳ ಲಾಲನೆ–ಪೋಷಣೆಗಾಗಿ 4,000 ಶಿಶುವಿಹಾರಗಳ ತೆರೆಯಲು ರಾಜ್ಯ ಸರ್ಕಾರ ಮುಂದಾಗಿದೆ.
- ಆಂಧ್ರದ ಚಿತ್ತೂರಿನ ರೈತ ಮುರಳಿ ಅವರು ತಾವು ಬೆಳೆದ ಟೊಮೆಟೊವನ್ನು ಕೋಲಾರದ ಮಾರುಕಟ್ಟೆಯಲ್ಲಿ ಮಾರುವ ಮೂಲಕ ಕೇವಲ 45 ದಿನಗಳಲ್ಲಿ ರೂ. 4 ಕೋಟಿ ಸಂಪಾದನೆ ಮಾಡಿದ್ದು, ಈ ಹಿಂದೆ ಅವರು ಮಾಡಿರುವ ಸಾಲವನ್ನೆಲ್ಲ ತೀರಿಸಿದರೂ 2 ಕೋಟಿ ರೂಪಾಯಿಗಳಷ್ಟು ಉಳಿಸಲಿದ್ದಾರೆ.
- ಇತ್ತೀಚೆಗೆ ಬಿಡುಗಡೆಯಾದ ಹುಲಿ ಗಣತಿಯ ಪ್ರಕಾರ ಕರ್ನಾಟಕದಲ್ಲಿ ಅತಿಹೆಚ್ಚು ಹುಲಿಗಳು ಇರುವ ಪ್ರದೇಶವಾಗಿ ಚಾಮರಾಜನಗರ ಜಿಲ್ಲೆಯ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ಪ್ರಥಮ ಸ್ಥಾನ ಪಡೆದಿದ್ದು, ದೇಶದಲ್ಲಿ ಅತಿಹೆಚ್ಚು ಹುಲಿಗಳು ಇರುವ ಎರಡನೇ ಹುಲಿ ಸಂರಕ್ಷಿತ ಪ್ರದೇಶವಾಗಿ ಹೊರಹೊಮ್ಮಿದೆ.
- ಚಂದ್ರಯಾನ–3 ಬೆನ್ನಲ್ಲೇ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ಶ್ರೀಹರಿಕೋಟದಿಂದ ಸಿಂಗಾಪೂರದ 6 ಉಪಗ್ರಹಗಳನ್ನು ಹೊತ್ತ ಪಿಎಸ್ಎಲ್‌ವಿ–ಸಿ56 ರಾಕೆಟ್ ಅನ್ನು ಯಶಸ್ವಿಯಾಗಿ ಉಡಾವಣೆ ಮಾಡಲಾಗಿದೆ.

## ಓದುಗರ ಅನಿಸಿಕೆ...




**ಜನರು ಆದಾಯ ಕೊರತೆಯಿಂದ ಬಳಲುತ್ತಿದ್ದಾರೆ :** ರಿಸರ್ವ್ ಬ್ಯಾಂಕ್ ಬಿಡುಗಡೆ ಮಾಡಿರುವ ದಾಖಲೆಗಳ ಪ್ರಕಾರ, ದೇಶದಲ್ಲಿ ಕ್ರೆಡಿಟ್‌ಕಾರ್ಡ್ ಬಳಸಿ ಮಾಡುವ ಖರ್ಚುಗಳು ತಿಂಗಳಿಗೆ ರೂ.1.4 ಲಕ್ಷ ಕೋಟಿಗೆ ತಲುಪಿ ದಾಖಲೆ ನಿರ್ಮಿಸಿದೆ. ಅಲ್ಲದೇ ಕ್ರೆಡಿಟ್ ಕಾರ್ಡ್ ಮೂಲಕ ಮಾಡಿದ ಬಿಲ್‌ಗಳನ್ನು 90 ದಿನಗಳ ನಂತರವೂ ಮರುಪಾವತಿ ಮಾಡದೆ ಇರುವವರ ಸಂಖ್ಯೆಯೂ ಹೆಚ್ಚಾಗುತ್ತಿದೆ ಎಂದು ಸಿಬಿಲ್ ಹೇಳಿದೆ. ಇದು ಜನರು ಆದಾಯ ಕೊರತೆಯಿಂದ ಬಳಲುತ್ತಿರುವುದನ್ನು ತೋರಿಸುತ್ತಿದೆಯಲ್ಲವೇ?

▸▸ **ಚಂದ್ರಾಪುರ ಕೃಷ್ಣ, ಆನೇಕಲ್**

**ಶ್ಲಾಘನೀಯವಾಗಿದೆ :** ರಾಜ್ಯದ ಅನೇಕ ಸಹಕಾರ ಸಂಘ, ಸಂಸ್ಥೆಗಳಲ್ಲಿ ಹಾಗೂ ಸೌಹಾರ್ದ ಸಹಕಾರಿಗಳಲ್ಲಿ ಅನೇಕ ಹಣ ದುರುಪಯೋಗದ ಹಗರಣಗಳ ಹಿನ್ನೆಲೆಯಲ್ಲಿ ಆಗಬೇಕಾಗಿರುವ ಕಾನೂನಾತ್ಮಕ ತಿದ್ದುಪಡಿ ತರುವ ಸಂಬಂಧ ಶ್ರೀ ಲಕ್ಷ್ಮಣ ಸಂಗಪ್ಪ ಸವದಿ ಅವರ ಅಧ್ಯಕ್ಷತೆಯಲ್ಲಿ ಸಹಕಾರ ಕ್ಷೇತ್ರದಲ್ಲಿ ಹೆಚ್ಚಿನ ಜ್ಞಾನ ಮತ್ತು ಅನುಭವವುಳ್ಳ ಸದಸ್ಯರನ್ನು ನೇಮಿಸಿ ವರದಿ ನೀಡಲು ತಿಳಿಸಿರುವುದು ಶ್ಲಾಘನೀಯವಾಗಿದೆ.

▸▸ **ಸಂಗಪ್ಪ ದಾನಪ್ಪ ಪಾಟೀಲ್., ಹಾನಗಲ್**

ಸಂಪಾದಕರು :
**ಪುಂಡಲೀಕ ಎನ್. ಕೇರೂರೆ,**
ಮುಖ್ಯ ಕಾರ್ಯನಿರ್ವಹಣಾಧಿಕಾರಿ,
ಕರ್ನಾಟಕ ರಾಜ್ಯ ಪಟ್ಟಣ ಸಹಕಾರ
ಬ್ಯಾಂಕುಗಳ ಮಹಾಮಂಡಳ ನಿ.,
ಬೆಂಗಳೂರು.

**ಇವರಿಗೆ,**

Edited, Published and printed by Pundalik N. Kerure, C.E.O. on behalf of the
Karnataka State Co-operative Urban Banks Federation Ltd., Bangalore - 560027.
Published at : # 132, K.H. Road, Bangalore - 560027.
Printed at : Navarathna Printers, # 35, 3rd Cross, Sudhamanagar, Bangalore – 560027.